# ವಿಮರ್ಶಾತ್ಮಕ ಬೋಧನಶಾಸ್ತ್ರ ಹಾಗೂ ತರಗತಿ ಕಾರ್ಯಾನ್ವಯನ[1]

**DEAN BRAA ಮತ್ತು PETER CALLERO, ಪಶ್ಚಿಮ ಒರೆಗಾನ್ ವಿಶ್ವವಿದ್ಯಾನಿಲಯ**

*ಈ ಲೇಖನದಲ್ಲಿ ನಾವು ಸಮಾಜಶಾಸ್ತ್ರದ ಬೋಧನೆಯಲ್ಲಿ ವಿಮರ್ಶಾತ್ಮಕ ಬೋಧನಶಾಸ್ತ್ರದ ಅಳವಡಿಕೆಯನ್ನು ಪ್ರತಿಪಾದಿಸುತ್ತೇವೆ. ಮೊದಲಿಗೆ ನಾವು, ನವ-ಮಾರ್ಕ್ಸ್‌ವಾದಿ ಪರಿಕಲ್ಪನೆಯ ಪರಿಶೀಲನೆಯೊಂದಿಗೆ, ವಿಮರ್ಶಾತ್ಮಕ ಬೋಧನಶಾಸ್ತ್ರಕ್ಕಾಗಿ ಸೈದ್ಧಾಂತಿಕ ಹಾಗೂ ವಿಮೋಚನೆಗೆ ಸಂಬಂಧಿಸಿದ ತಾರ್ಕಿಕ ವಿವರಣೆಯನ್ನು ಸ್ಥಾಪಿತಗೊಳಿಸುತ್ತೇವೆ. ನಂತರ, ಪಶ್ಚಿಮ ಒರೆಗಾನ್ ವಿಶ್ವವಿದ್ಯಾನಿಲಯದ ಸಮಾಜಶಾಸ್ತ್ರ ಪಠ್ಯಕ್ರಮದಲ್ಲಿ ವಿಮರ್ಶಾತ್ಮಕ ಬೋಧನಶಾಸ್ತ್ರದ ಒಂದು ನಿರ್ದಿಷ್ಟ ಅನ್ವಯನವನ್ನು ಪರೀಕ್ಷಿಸುತ್ತೇವೆ. ವಿದ್ಯಾರ್ಥಿಗಳು ವೈಯಕ್ತಿಕ ಹಾಗೂ ಸಾಮಾಜಿಕ ಪರಿವರ್ತನೆಯ ವಾಹಕವಾಗಿ ವರ್ತಿಸುವಂತಹ ಒಂದು ಯಶಸ್ವೀ ಬಾಡಿಗೆದಾರರ ಸಂಘವನ್ನು ರೂಪಿಸಲು ಸಾಧ್ಯವಾಗುವ ಸಮೂಹ ಸಂಘಟನೆಯನ್ನು ಕುರಿತ ಒಂದು ಅಧ್ಯಯನ ಸರಣಿಯ ಕಡೆಗೆ ನಾವು ವಿಶೇಷವಾಗಿ ಗಮನಹರಿಸುತ್ತೇವೆ.*

---

> ಅಧಿನಾಯಕತ್ವದ (hegemony) ಪ್ರತಿಯೊಂದು ಸಂಬಂಧವೂ ಅವಶ್ಯವಾಗಿ ಒಂದು ಶೈಕ್ಷಣಿಕ ಸಂಬಂಧವೇ ಆಗಿರುತ್ತದೆ. (Gramsci, ಉದ್ಧೃತ: Forgacs [2000:348]).

ವಿಮರ್ಶಾತ್ಮಕ ಬೋಧನಶಾಸ್ತ್ರವು ಶಿಕ್ಷಣದ ನಿಟ್ಟಿನ ಬೋಧನೆ ಹಾಗೂ ಕಲಿಕೆಗೆ, ಪ್ರಜಾಸತ್ತಾತ್ಮಕ ಹಾಗೂ ಆಂದೋಳನಕಾರಿ ಮಾರ್ಗಗಳನ್ನು ಬಳಸುತ್ತಾ, ಸಮಾಜದಲ್ಲಿನ ದಮನಕಾರೀ ರಚನೆಗಳನ್ನು ಪರಿವರ್ತಿಸಲು ಇಚ್ಛಿಸುವಂತಹ ಒಂದು ತೀವ್ರಗಾಮಿ ಪ್ರಸ್ತಾವನೆಯಾಗಿದೆ (ದಾರ್ದರ್, ಬಾಲ್ಟೊದಾನೋ ಹಾಗೂ ಟೋರ್ರೆಸ್ 2003; ಫ್ರೇರೆ 1973, 1974; ಶೋರ್1987). ಸಮಾಜಶಾಸ್ತ್ರದ ಸ್ಥಾಪಕರುಗಳ ಜ್ಞಾನೋದಯ ಮೂಲತತ್ತ್ವಗಳು ಹಾಗೂ ವಿಮೋಚನಾತ್ಮಕ ಉದ್ದಿಶ್ಯಗಳ ಹಿನ್ನೆಲೆಯಲ್ಲಿ, ಸಮಾಜಶಾಸ್ತ್ರದ ತರಗತಿಗೆ ವಿಮರ್ಶಾತ್ಮಕ ಬೋಧನಶಾಸ್ತ್ರದ ಅನ್ವಯನಕ್ಕೆ ನೀಡಿದ ಗಮನವು ಬಹಳ ಕಡಿಮೆ ಎಂಬುದು ಆಶ್ಚರ್ಯಕರವಾಗಿದೆ (Feagin ಹಾಗೂ Vera 2001). ಅನೇಕ ಲೇಖಕರು ಹೆಚ್ಚು ಸುಧಾರವಾದಿ ಸಮಾಜಶಾಸ್ತ್ರ ಪಠ್ಯಕ್ರಮಕ್ಕಾಗಿ ಪ್ರಸ್ತಾವಿಸುವಲ್ಲಿ ಇಂತಹದೇ ಅಭಿಪ್ರಾಯವನ್ನು ಹೊಂದಿರುವಾಗ (ಕೌಮನ್ 2002) ಕೆಲವೇ ಕೆಲವರು ಪರ್ಯಾಯ ತರಗತಿಯ ನಡಾವಳಿಗಳು ಹಾಗೂ ಕಾರ್ಯನೀತಿಗಳ ವಿವರಣೆಗಳನ್ನು ಮುಂದಿಟ್ಟಿದ್ದಾರೆ. ಈ ಪತ್ರಿಕೆಯಲ್ಲಿ ಸಮಾಜಶಾಸ್ತ್ರ ತರಗತಿಯಲ್ಲಿ ವಿಮರ್ಶಾತ್ಮಕ ಬೋಧನಶಾಸ್ತ್ರದ ಉದ್ವಿಕಾಸದ (development) ಮುಂಚಲನವು ನಮ್ಮ ಉದ್ದಿಶ್ಯವಾಗಿದೆ. ಈವರೆಗಿನ ಹೆಚ್ಚಿನ ಪ್ರಸ್ತಾವನೆಗಳು ಅಥವಾ ಸಲಹೆಗಳು ಸಾಪೇಕ್ಷವಾಗಿ ವ್ಯಾಪ್ತಿ ಮತ್ತು ವಿವರಗಳಲ್ಲಿ ಪರಿಮಿತವೆನಿಸಿದ ಸಾಮಾನ್ಯ ತತ್ತ್ವಗಳು, ಶಿಕ್ಷಣಾವಧಿಯ ಕಾರ್ಯನಿಯೋಜನೆಗಳು, ಅಥವಾ ಹೊಸ ಪಠ್ಯಕ್ರಮಗಳ ಬಗ್ಗೆ ಗಮನಹರಿಸಿವೆ (*Teaching Sociology* 1998ನ್ನು ತುಲನೆಮಾಡಿ ನೋಡಿ). ನಮ್ಮ ಈ ಪ್ರಸ್ತಾವನೆಯು ಹೆಚ್ಚು ಮಹತ್ವಾಕಾಂಕ್ಷೆಯದಾಗಿದೆ.

ವಿಮರ್ಶಾತ್ಮಕ ಬೋಧನಶಾಸ್ತ್ರದ ಬಗೆಗಿನ ಬದ್ಧತೆಯು ಪ್ರತಿಯೊಬ್ಬ ವಿದ್ಯಾರ್ಥಿಯ ಸಾಧನೆಯ ಕುರಿತಾದ ಕಾಳಜಿಗೆ ಅತೀತವಾಗಿ ನಮ್ಮನ್ನು ಸಂಚಾಲಿತಗೊಳಿಸುವುದೇಕೆ ಮತ್ತು ಶಿಕ್ಷಣ ಹಾಗೂ ಸಮಾಜದ ಪರಿವರ್ತನೆಗಾಗಿ ಹೆಚ್ಚಿನ ಬದ್ಧತೆಯೊಂದನ್ನು ಏಕೆ ಬಯಸುತ್ತದೆ ಎಂಬುದನ್ನು ನಾವು ಪತ್ರಿಕೆಯ ಮೊದಲ ಭಾಗದಲ್ಲಿ ಅಭಿವ್ಯಕ್ತಿಸುತ್ತೇವೆ. ಪುನರ್‌ಸೃಜನೆಯ

---

[1]ಸಮಾಜಶಾಸ್ತ್ರ ವಿಭಾಗದಲ್ಲಿ ನಮ್ಮ ಸಹೋದ್ಯೋಗಿ ಹಾಗೂ ಸ್ನೇಹಿತೆಯಾಗಿರುವ ಪ್ರೊ. ಮಾರೀನ್ ಡೋಲನ್ ಅವರಿಗೆ ವಿಶೇಷ ಕೃತಜ್ಞತೆಗಳನ್ನು ಸಲ್ಲಿಸಲು ನಾವು ಇಚ್ಛಿಸುತ್ತೇವೆ. ವಿಮರ್ಶಾತ್ಮಕ ಬೋಧನಶಾಸ್ತ್ರದ ಬಗ್ಗೆ ಅವರಿಗಿರುವ ಬದ್ಧತೆಯು ಉತ್ಸಾಹ ಹಾಗೂ ಪ್ರೋತ್ಸಾಹದ ಸ್ರೋತವೆನಿಸಿದೆ. ಲೇಖಕರ ಈ ವಿಳಾಸದೊಂದಿಗೆ ನಿಮ್ಮ ಪತ್ರ ವ್ಯವಹಾರವನ್ನು ಕೈಗೊಳ್ಳಬಹುದಾಗಿದೆ: Department of Sociology, Western Oregon University, 345 North Monmouth Avenue, Monmouth, Oregon 97361; email: braad@wou.edu or callerp@wou.edu.
ಸಂಪಾದಕರ ಸೂಚನೆ: ಈ ಪತ್ರಿಕೆಯ ಪರಿಶೀಲಕರು (ಅಕಾರಾದಿ ಕ್ರಮದಲ್ಲಿ): Patrick Burman and Peter Kaufman.

ಕುರಿತಾದ ನವ-ಮಾರ್ಕ್ಸ್‌ವಾದಿ ಪರಿಕಲ್ಪನೆಯ ಒಂದು ಸಂಕ್ಷಿಪ್ತ ಮೇಲ್ನೋಟದೊಂದಿಗೆ ವಿಮರ್ಶಾತ್ಮಕ ಬೋಧನಶಾಸ್ತ್ರದ ಜ್ಞಾನಶಾಸ್ತ್ರೀಯ ಅಡಿಪಾಯವನ್ನು ಸ್ಥಾಪಿಸುವ ಮೂಲಕ ನಾವಿದನ್ನು ಆರಂಭಿಸುತ್ತೇವೆ. ಪತ್ರಿಕೆಯ ಎರಡನೆಯ ಭಾಗದಲ್ಲಿ ಪಶ್ಚಿಮ ಒರೆಗಾನ್ ವಿಶ್ವವಿದ್ಯಾನಿಲಯದ ಸಮಾಜಶಾಸ್ತ್ರ ಪಠ್ಯಕ್ರಮದಲ್ಲಿ ವಿಮರ್ಶಾತ್ಮಕ ಬೋಧನಶಾಸ್ತ್ರದ ಬಳಕೆಯ ಬಗ್ಗೆ ಗಮನಹರಿಸುತ್ತೇವೆ. ಸಮಾಜಶಾಸ್ತ್ರ ತರಗತಿಯ ಪರಿವರ್ತಕ (transformative) ಸಾಮರ್ಥ್ಯವನ್ನು ವಿಶದಪಡಿಸುವುದು ಈ ಭಾಗದಲ್ಲಿನ ನಮ್ಮ ಉದ್ದಿಶ್ಯವಾಗಿದೆ. ವಿಮರ್ಶಾತ್ಮಕ ಬೋಧನಶಾಸ್ತ್ರದ ಮುಖ್ಯ ಘಟಕಗಳನ್ನು ಅನ್ವಯಿಸಿರುವಂತಹ ಸಮೂಹ ಸಂಘಟನೆಯ ಬಗೆಗಿನ ಸ್ಥಾಪಿತ ಅಧ್ಯಯನ ಸರಣಿಯೊಂದರ ವಿಸ್ತೃತ ವಿವರಣೆಯೊಂದಿಗೆ ನಾವಿದನ್ನು ನಿರ್ವಹಿಸುತ್ತೇವೆ.

## ಪುನರ್‌ಸೃಜನೆಯ ನಿಟ್ಟಿನಲ್ಲಿ ಶಿಕ್ಷಣ

ಆಧುನಿಕ ಸಮಾಜದಲ್ಲಿನ ಔಪಚಾರಿಕ ಶಿಕ್ಷಣದ ಪದ್ಧತಿಗಳು, ಭಾಗಶಃ, ಸುಲಿಗೆಕೋರ ಬಂಡವಾಳಶಾಹಿ ಪದ್ಧತಿಯ ಪಾಲನೆ ಮತ್ತು ಪುನರ್‌ಸೃಜನೆಯ ನಿಟ್ಟಿನಲ್ಲಿ ಕಾರ್ಯನಿರತವಾಗಿವೆ (Apple 1990; Mayo 1999; McLaren 2003) ಎಂಬುದು, ನವ-ಮಾರ್ಕ್ಸ್‌ವಾದಿ ವಿಮರ್ಶಾತ್ಮಕ ಬೋಧನಶಾಸ್ತ್ರದ ಒಂದು ಮೂಲಭೂತ ಆಧಾರವೆನಿಸಿದೆ. ಬಂಡವಾಳಶಾಹಿಯೇತರ ವರ್ಗಗಳ ಬೆಲೆ-ತೆರುವಿಕೆಯ ಹಿನ್ನೆಲೆಯಲ್ಲಿ, ಆರ್ಥಿಕ ಮೇಲ್ವರ್ಗದವರ ವರ್ಗ-ಹಿತಾಸಕ್ತಿಗಳನ್ನು ಮುಂಚಲಿಸುವಲ್ಲಿ ಶಾಲೆಗಳನ್ನು ಬಳಸುವಾಗ ಇದು ಈಡೇರಿದಂತಾಗುತ್ತದೆ (1995ರಲ್ಲಿ ಮೋರೊ ಮತ್ತು ಟೋರೆಸ್). ಔಪಚಾರಿಕ ಶಿಕ್ಷಣವು ವರ್ಗದ ಪುನರ್‌ಸೃಜನೆಗೆ ಕೊಡುಗೆ ನೀಡುವ ಕ್ರಮವು ಯಾವಾಗಲೂ ಸ್ಪಷ್ಟವಾಗಿರುವುದಿಲ್ಲ ಮತ್ತು ಸಾಮಾನ್ಯವಾಗಿ ಒಪ್ಪಿಗೆಯ ಮೂಲಕ ನಡೆಯುವ ದಬ್ಬಾಳಿಕೆಯನ್ನು, ಅಥವಾ ಗ್ರಾಂಷಿ ಅವರು ಹೆಸರಿಸಿದಂತೆ ಮಧ್ಯಮವರ್ಗೀಯ ಆಧಿಪತ್ಯವನ್ನು (bourgeois hegemony) ಒಳಗೊಳ್ಳುತ್ತದೆ (Allman 1988; Forgas 2000; Mayo 1999).

ಗ್ರಾಂಷಿ ಅವರ ಪ್ರಕಾರ, ದಮನನೀತಿ ಎಂಬುದು ಶ್ರಮಿಕ ಸಂಘಟನೆಗಳು, ಚರ್ಚುಗಳು, ಕುಟುಂಬಗಳು ಹಾಗೂ ಶಾಲೆಗಳಂತಹ ರಚನಾ ಸರಣಿಯ ಬಳಕೆಯ ಮೂಲಕ ಸಮಾಜದ ಮೇಲೆ ನಡೆಯುವ ದಬ್ಬಾಳಿಕೆಯಾಗಿದೆ. ಈ ರಚನೆಗಳು ಸ್ಥಾಪಿತ ಸಾಮಾಜಿಕ ಕ್ರಮ ಹಾಗೂ ಅದನ್ನು ನಿಯಂತ್ರಿಸುವ ವರ್ಗಾಸಕ್ತಿಗಳನ್ನು ಬೆಂಬಲಿಸುವ ಅಥವಾ ಸೃಜಿಸುವ ಮೌಲ್ಯಗಳು, ಮನೋಭಾವಗಳು, ವರ್ತನೆಗಳು, ನಂಬಿಕೆಗಳು ಹಾಗೂ ನೈತಿಕತೆಗಳ ವ್ಯವಸ್ಥೆಯೊಂದನ್ನು ವ್ಯಕ್ತಿಗಳಿಗೆ ಕಲಿಸುತ್ತವೆ (Boggs 1976; Forgas 2000). ಕಾರ್ಲ್ ಬಾಗ್ಸ್ ಅವರು, "ಈ ಅರ್ಥದಲ್ಲಿ ದಮನನೀತಿಯನ್ನು, ಜೀವನದ ಪ್ರತಿಯೊಂದು ವಲಯದಲ್ಲಿಯೂ ಸೈದ್ಧಾಂತಿಕ ನಿಯಂತ್ರಣ ಹಾಗೂ ಸಾಮಾಜೀಕರಣದ ಮಧ್ಯವರ್ತಿಗಳು ಪ್ರಚಾರಮಾಡಿದ ಒಂದು ಸಂಘಟನಾ ತತ್ತ್ವ, ಅಥವಾ ಜಾಗತಿಕ ದೃಷ್ಟಿಕೋನವೆಂದು ವ್ಯಾಖ್ಯಾನಿಸಬಹುದು" ಎಂದು ಪ್ರತಿಪಾದಿಸಿದ್ದಾರೆ (ಪುಟ 39).

ವಿಮರ್ಶಾತ್ಮಕ ಬೋಧನಶಾಸ್ತ್ರದ ಸಂಪ್ರದಾಯದ ವ್ಯಾಪ್ತಿಯಲ್ಲಿ ಕಾರ್ಯಶೀಲರಾಗಿರುವ ವಿದ್ವಾಂಸರು ಪುನರ್‌ಸೃಜನೆಯ ಪ್ರಕ್ರಿಯೆಗೆ ಕೊಡುಗೆ ನೀಡುವಂತಹ ತರಗತಿಯೊಳಗಿನ ಅನೇಕ ಅನುಶಾಸಿತ ನಡವಳಿಕೆಗಳನ್ನು ಗುರುತಿಸಿದ್ದಾರೆ. ಉದಾಹರಣೆಗೆ, ಅಧಿಕಾರದ ಶ್ರೇಣೀಕೃತ ರಚನೆಗಳನ್ನು ಒಪ್ಪಿಕೊಳ್ಳುವಂತೆ ವಿದ್ಯಾರ್ಥಿಗಳನ್ನು ಸಾಮಾಜೀಕರಿಸುವಂತಹ ಮತ್ತು ಅವರ ನಡತೆಯನ್ನು ಪ್ರಶಿಕ್ಷಿತಗೊಳಿಸುವ (conditioned) ಗುಪ್ತ ಪಠ್ಯಕ್ರಮದ ಅಸ್ತಿತ್ವವನ್ನು Apple ಅವರು (1990ರಲ್ಲಿ) ಗುರುತಿಸಿದ್ದಾರೆ, ಮತ್ತು Shor (1992) ಅವರು, ವಿದ್ಯಾರ್ಥಿಗಳು ಸಮಾಜದ ನಿಷ್ಕ್ರಿಯ, ಅನುಸಾರಿ(conformist) ಹಾಗೂ ವಿಧೇಯ ಸದಸ್ಯರಾಗುವಂತೆ ಅವರನ್ನು ಪ್ರಶಿಕ್ಷಿತಗೊಳಿಸುವ, ಮತ್ತು ಆ ಮೂಲಕ ಸುಲಭವಾಗಿ ಸ್ವಾಧೀನಪಡಿಸಿಕೊಳ್ಳಬಹುದಾದ ಕೆಲಸಗಾರರನ್ನು ಹಾಗೂ ನಿಷ್ಕ್ರಿಯ, ಉದಾಸೀನ ನಾಗರಿಕರನ್ನು ರೂಪಿಸುವಂತಹ ಅಧಿಕಾರಶಾಹಿ ತರಗತಿಯ ಕುರಿತು ವಿವರಿಸುತ್ತಾರೆ.

ಸ್ಥಿತ (existing) ವರ್ಗ-ದಬ್ಬಾಳಿಕೆಯನ್ನು ನ್ಯಾಯಬದ್ಧಗೊಳಿಸಲು ಸಹಾಯಮಾಡುವಂತಹ ಸಾಂಸ್ಕೃತಿಕ ಚಿಂತನೆಗಳನ್ನು ಶಿಕ್ಷಕರು ಪ್ರೋತ್ಸಾಹಿಸಿದಾಗಲೂ ಈ ಪುನರ್‌ಸೃಜನೆಯು ಘಟಿಸುತ್ತದೆ. ಉದಾಹರಣೆಗೆ, ಅಮೆರಿಕದ ಶಾಲೆಗಳಲ್ಲಿ ವೈಯಕ್ತಿಕ

ನಿರ್ಣಯಗಳು ಹಾಗೂ ಕ್ರಿಯೆಗಳು (ವ್ಯಕ್ತಿವಾದ) ಯಶಸ್ಸಿನ ಹಾಗೂ ಪ್ರಗತಿಪರ ಚಲನೆಯ ಆಧಾರವೆಂಬುದಾಗಿ ವಿದ್ಯಾರ್ಥಿಗಳಿಗೆ ಆಗಿಂದಾಗ್ಗೆ ಬೋಧಿಸಲಾಗುತ್ತದೆ (Apple 1990; Bowles ಮತ್ತು Gintis 1976). ಸಮಾಜದಲ್ಲಿ ಅವರವರ ಸಾಪೇಕ್ಷ ಶ್ರೇಷ್ಠತೆಗೆ ಅನುಸಾರವಾಗಿ ಜನರನ್ನು ಶ್ರೇಣಿಬದ್ಧಗೊಳಿಸಲಾಗುತ್ತದೆ ಮತ್ತು ಆದಾಯ, ಸಂಪತ್ತು ಹಾಗೂ ಅಧಿಕಾರದಲ್ಲಿನ ಅವರ ಅಸಮಾನತೆಗಳು ಅವರ ವೈಯಕ್ತಿಕ ಕ್ರಿಯೆಗಳ ಪರಿಣಾಮವೆಂಬುದು ಇಲ್ಲಿನ ಪಾಠವಾಗಿರುತ್ತದೆ (Bowles ಮತ್ತು Gintis 1976). ಮುಕ್ತ ಮಾರುಕಟ್ಟೆ ಸ್ಪರ್ಧೆಯ (ವ್ಯಾಪಾರ ಸ್ವಾತಂತ್ರ್ಯ) ಪ್ರೋತ್ಸಾಹ ಅಥವಾ ಬಂಡವಾಳಶಾಹಿ ಚಿಂತನೆಯ ಒಂದು ಸ್ಪಷ್ಟ ಮೂಲಾಧಾರವಾದ - ವ್ಯಕ್ತಿಗತ ಲಾಭದ ಅನುಸರಣೆಯು ಸಾಮೂಹಿಕ ಪ್ರಯೋಜನಗಳನ್ನು ಉಂಟುಮಾಡುತ್ತದೆ ಎಂಬ ನಂಬಿಕೆಯು ಇದಕ್ಕೆ ಇನ್ನೊಂದು ಉದಾಹರಣೆಯಾಗಿದೆ (Giroux 2003).

ಶಿಸ್ತು, ಪಠ್ಯಕ್ರಮ ಹಾಗೂ ವೈಚಾರಿಕ ವಿಷಯವಸ್ತುಗಳ ಮೂಲಕ ಒಪ್ಪಿಕೊಳ್ಳುವ ಸ್ವಭಾವವನ್ನು ಕಲಿಸುವುದರ ಜೊತೆಗೆ, ಶಾಲೆಗಳು, ಬಂಡವಾಳಶಾಹಿಯ ಬಗ್ಗೆ ವಿಮರ್ಶಾತ್ಮಕ ಪ್ರಶ್ನೆಗಳನ್ನು ಸೃಜಿಸಬಹುದಾದ - ಅಸಮಾನತೆ, ದಬ್ಬಾಳಿಕೆ, ಶೋಷಣೆ, ಸಾಮ್ರಾಜ್ಯಶಾಹಿ, ಕ್ರಾಂತಿ, ವರ್ಗಸಂಘರ್ಷ ಹಾಗೂ ಶ್ರಮಿಕ ಚಳುವಳಿಗಳ ಗಂಭೀರ ವಿಶ್ಲೇಷಣೆಗಳನ್ನೊಳಗೊಂಡಂತೆ - ಕೆಲವು ಜ್ಞಾನದ ಪ್ರಕಾರಗಳನ್ನು ವರ್ಜಿಸುವ ಮೂಲಕವೂ ಸಹ ಸ್ಥಾಪಿತ ಸಾಮಾಜಿಕ ಕ್ರಮಗಳನ್ನು ಪುನರ್‌ಸೃಜಿಸುತ್ತದೆ (Apple 1990). ಹೋವರ್ಡ್ ಝಿನ್ (2001) ಅವರ A People's History of the United States ಎಂಬ ಜ್ಞಾನವರ್ಧಕ ಹಾಗೂ ವಿಮರ್ಶಾತ್ಮಕ ಪಠ್ಯ ಭಾಗವು ಹೆಚ್ಚಿನ ಅಮೆರಿಕನ್ನರು ಪಾಠ ಕಲಿಯುವುದಿಲ್ಲ ಎಂಬುದನ್ನು ತಿಳಿಸುವ ಅಮೆರಿಕದ ಇತಿಹಾಸದ ಒಂದು ಅತ್ಯುತ್ತಮ ಉದಾಹರಣೆಯಾಗಿದೆ. ವಿಜ್ಞಾನವು ಅಂತಃಸಿದ್ಧವಾದ ಒಂದು ವಿಮರ್ಶಕ, ಸಿದ್ಧಾಂತಾಧಾರಿತ ಪ್ರಕ್ರಿಯೆ ಎಂಬುದನ್ನು ಕಲಿಸುವಲ್ಲಿನ ವೈಫಲ್ಯವೂ ಸಹ ಇಲ್ಲಿನ ಒಂದು ಸುಸ್ಪಷ್ಟ ಲೋಪವೆನಿಸಿದೆ. ಶಾಲೆಗಳು, ವಿಜ್ಞಾನವನ್ನು ಸಾಮಾಜಿಕ ವಿದ್ಯಮಾನಗಳನ್ನು ವಿವರಿಸುವಂತಹ ಮಾದರಿಗಳು ಅಥವಾ ರಚನೆಗಳನ್ನು (ಸಿದ್ಧಾಂತಗಳನ್ನು) ಸಂವರ್ಧಿಸುವ ಒಂದು ವಿಧಾನವಾಗಿ ಬಿಂಬಿಸುವ ಬದಲು; ವಸ್ತುಸ್ಥಿತಿಗಳ ಒಂದು ಸಂಗ್ರಹ ಅಥವಾ ವಿನ್ಯಾಸವೆಂಬಂತೆ ಅದನ್ನು ಬಿಂಬಿಸಲುಸುವಲ್ಲಿ ಪ್ರವೃತ್ತವಾಗಿವೆ (Keat ಮತ್ತು Urry 1982).

ಆದಾಗ್ಯೂ, ವಿಮರ್ಶಾತ್ಮಕ ಬೋಧನಶಾಸ್ತ್ರದ ನಡಾವಳಿಯು ಪುನರ್‌ಸೃಜನೆಯ ವಿವರಣೆಗಳಿಗಷ್ಟೇ ಸೀಮಿತವಾಗಿಲ್ಲ. ಈ ಬೋಧನಶಾಸ್ತ್ರದ ಸೈದ್ಧಾಂತಿಕ ಚೌಕಟ್ಟು, ಪುನರ್‌ಸೃಜನೆಯ ಪ್ರಕ್ರಿಯೆಯ ವಿಮರ್ಶೆಯ ಆಧಾರದಲ್ಲಿ ರೂಪುಗೊಂಡಿದ್ದಾಗ್ಯೂ, ವಿಮೋಚನೆಯ ನಿಟ್ಟಿನ ಶಿಕ್ಷಣದ ಅಂತಸ್ಸತ್ವಕ್ಕೆ ಒತ್ತು ನೀಡುವುದು ಅದರ ಅತಿಮುಖ್ಯ ವ್ಯಾಖ್ಯೇಯ ಲಕ್ಷಣವಾಗಿದೆ. ಮೈಖೆಲ್ ಆಪಲ್ ಅವರು (1985) ಪ್ರತಿಪಾದಿಸುವಂತೆ, ಬಂಡವಾಳಶಾಹಿ ವ್ಯವಸ್ಥೆಯು ಶಿಕ್ಷಣದ ಫಲಿತಾಂಶಗಳನ್ನು ಸಂಪೂರ್ಣವಾಗಿ ನಿರ್ಧರಿಸುವುದಿಲ್ಲ, ಮತ್ತು ಹೆಚ್ಚಿನ ಸಾರ್ವಜನಿಕ ಶಾಲೆಗಳು "ಪ್ರತಿರೋಧ, ಪ್ರತಿಸ್ಪರ್ಧೆ ಹಾಗೂ ಸಜೀವ ಸಂಸ್ಕೃತಿಯ" ಉದಯಕ್ಕೆ ಅವಕಾಶವನ್ನು ನೀಡುವ ತಕ್ಕಮಟ್ಟಿನ ಸ್ವಾಯತ್ತತೆಯ ಮಟ್ಟವನ್ನು ಉಳಿಸಿಕೊಂಡಿವೆ (ಪುಟ 28). ಹೀಗೆ ವಿಮರ್ಶಾತ್ಮಕ ಬೋಧನಶಾಸ್ತ್ರದ ದೃಷ್ಟಿಕೋನದ ನಿಟ್ಟಿನಲ್ಲಿ, ಯಶಸ್ವೀ ಶಿಕ್ಷಣ ವ್ಯವಸ್ಥೆಯು ಬಂಡವಾಳಶಾಹಿ ಪುನರ್‌ಸೃಜನೆಯ ಪ್ರಕಾರಗಳಿಗೆ ಪ್ರತಿರೋಧವೊಡ್ಡುವುದಲ್ಲದೆ ಒಂದು ಪ್ರತಿ-ಅಧಿನಾಯಕತ್ವದ (counter hegemony) ಸಂವರ್ಧನೆಯನ್ನು ಪ್ರೋತ್ಸಾಹಿಸುವ ಮೂಲಕ ಸಾಮಾಜಿಕ ಪರಿವರ್ತನೆಗೆ ಅವಕಾಶ ನೀಡುವ ಸಕಾರಾತ್ಮಕ ಕ್ರಮಗಳನ್ನು ಸಹ ಅವಶ್ಯವಾಗಿ ಕೈಗೊಳ್ಳುತ್ತದೆ. ಸಾಂಸ್ಥಿಕ, ಬಂಡವಾಳಶಾಹಿ ಅಧಿನಾಯಕತ್ವದ ವಿಮರ್ಶೆಯಷ್ಟೇ ಅಲ್ಲದೆ ಆ ಕುರಿತ ನಿರಾಕರಣೆಯನ್ನು ಅಭಿವ್ಯಕ್ತಿಸುವ ಸಿದ್ಧಾಂತಗಳು, ನಡವಳಿಕೆಗಳು (ಕಾರ್ಯಾನ್ವಯನಗಳು), ಮೌಲ್ಯಗಳು, ನೈತಿಕತೆ ಹಾಗೂ ಸಮಗ್ರ ಸಂಸ್ಕೃತಿಯನ್ನು ಇದು ಒಳಗೊಳ್ಳುತ್ತದೆ (McLaren 2003; Shor 1992).

ಈ ಮುಂದಿನ ವಿಭಾಗದಲ್ಲಿ ಪ್ರತಿ-ಅಧಿನಾಯಕತ್ವದ ಸಂವರ್ಧನೆಯನ್ನು ಪ್ರೋತ್ಸಾಹಿಸುವಂತಹ ಮತ್ತು ಇನ್ನಷ್ಟು ಪ್ರಜಾಸತ್ತಾತ್ಮಕ, ಮಾನವೀಯ ಹಾಗೂ ಸಮಾನತಾವಾದಿ ಸಮಾಜವನ್ನು ಮುಂಚಲನಗೊಳಿಸುವ ರೀತಿಯಲ್ಲಿ ಸಮಾಜಶಾಸ್ತ್ರ ಪಠ್ಯಕ್ರಮಕ್ಕೆ ವಿಮರ್ಶಾತ್ಮಕ ಬೋಧನಶಾಸ್ತ್ರವನ್ನು ಅನ್ವಯಿಸಬಹುದಾದ ವಿಧಾನದ ಕುರಿತು ನಾವು ಅನ್ವೇಷಿಸುತ್ತೇವೆ.

**ವಿಮರ್ಶಾತ್ಮಕ ಬೋಧನಶಾಸ್ತ್ರದ ಮೂಲಕ ಸಮಾಜಶಾಸ್ತ್ರ ತರಗತಿಯ ಪರಿವರ್ತನೆ**

ವಿಮರ್ಶಾತ್ಮಕ ಬೋಧನಶಾಸ್ತ್ರಕ್ಕೆ ವಿವಿಧ ಮೂಲಗಳಿದ್ದು ಅದು ಯಾವುದೇ ಏಕಮಾತ್ರ ಕಾರ್ಯಸೂಚಿಯನ್ನು ಪ್ರತಿನಿಧಿಸದಿದ್ದರೂ, ಬಹಳಷ್ಟು ಪ್ರತಿಪಾದಕರಿಂದ ಸಹಭಾಜಿತವಾದ (shared) ತತ್ತ್ವಗಳು ಹಾಗೂ ಅಂಶಗಳ ಒಂದು ಸಾಮಾನ್ಯ (common) ಸಮುಚ್ಚಯವನ್ನು ಗುರುತಿಸಲು ಸಾಧ್ಯವಿದೆ. ಈ ವಿಭಾಗದಲ್ಲಿ ವಿಮರ್ಶಾತ್ಮಕ ಬೋಧನಶಾಸ್ತ್ರದ ನಾಲ್ಕು ಪ್ರಧಾನ ಘಟಕಗಳ ಒಂದು ಸಂಕ್ಷಿಪ್ತ ಮೇಲ್ನೋಟದೊಂದಿಗೆ ಇದನ್ನು ಆರಂಭಿಸಿ, ನಂತರದಲ್ಲಿ, ಪಶ್ಚಿಮ ಒರೆಗಾನ್ ವಿಶ್ವವಿದ್ಯಾನಿಲಯದ ಅಧ್ಯಯನ ಸರಣಿಗಳ ಅನುಕ್ರಮದಲ್ಲಿ ಈ ಘಟಕಗಳ ವಾಸ್ತವಿಕ ಅನ್ವಯನದ ವಿಸ್ತೃತ ವಿವರಣೆಯನ್ನು ಆರಂಭಿಸುತ್ತೇವೆ.

ವಿಮರ್ಶಾತ್ಮಕ ಬೋಧನಶಾಸ್ತ್ರದ ಯಾವುದೇ ಗಂಭೀರ ಅನ್ವಯನವು ಒಂದಲ್ಲ ಒಂದು ಹಂತದಲ್ಲಿ ಹೆಚ್ಚಿನ ಸಂವಾದ, ವಿಮರ್ಶೆ, ಪ್ರತಿ-ಅಧಿನಾಯಕತ್ವ ಹಾಗೂ ಕಾರ್ಯಾನ್ವಯನಗಳಿಗೆ ಅವಕಾಶ ನೀಡುವ ಕ್ರಮಗಳನ್ನು ಕೈಗೊಳ್ಳಬೇಕು. ವಿಮರ್ಶಾತ್ಮಕ ಬೋಧನಶಾಸ್ತ್ರದ ಈ ಸಾರಭೂತ ಅಂಶಗಳು ಸಾಂಪ್ರದಾಯಿಕ ತರಗತಿಯಲ್ಲಿ ಸಾಮಾನ್ಯವಾಗಿ ಕಂಡುಬರುವುದಿಲ್ಲ.

ಸಂವಾದವು ಚರ್ಚೆ ಹಾಗೂ ವಿಶ್ಲೇಷಣೆಯಲ್ಲಿ ವಿದ್ಯಾರ್ಥಿ ಹಾಗೂ ಶಿಕ್ಷಕರ ಸಕ್ರಿಯ ಪಾಲ್ಗೊಳ್ಳುವಿಕೆಗೆ ಸಂಬಂಧಿಸಿದೆ. ರೂಢಿಗತವಾದ ಮೌನಸಂಸ್ಕೃತಿಯನ್ನು (Freire 1974) ಮೀರುವ ಮೂಲಕ, ಅದರಲ್ಲೂ ವಿಶೇಷವಾಗಿ ವಿದ್ಯಾರ್ಥಿಯ ಯಥಾರ್ಥ ಅನುಭವಗಳ ವಿಮರ್ಶಾತ್ಮಕ ಪರೀಕ್ಷಣೆಯ ಕಡೆಗೆ ಮಾತುಕತೆಯು ನಿರ್ದೇಶಿತಗೊಂಡಾಗ, ವಿದ್ಯಾರ್ಥಿಗಳು, ಅಧಿಕಾರವನ್ನು ಪಡೆದ ಭಾವನೆಯನ್ನು ಹೊಂದುತ್ತಾರೆ. ತರಗತಿಯಲ್ಲಿ ವಿದ್ಯಾರ್ಥಿಗಳ ಸಕ್ರಿಯ ಭಾಗವಹಿಸುವಿಕೆಯನ್ನು ಹೆಚ್ಚಿಸಲು ಮಾತ್ರವಲ್ಲದೆ, ವಿದ್ಯಾರ್ಥಿಗಳಲ್ಲಿ ವಿಮರ್ಶಾತ್ಮಕ ಸಾಮಾಜಿಕ ಪ್ರಜ್ಞೆಯನ್ನು ಬೆಳೆಸಲೂ ಸಹ ಈ ಸಂವಾದವು ಬಯಸುತ್ತದೆ.

ಅಸಮಾನತೆ, ಶೋಷಣೆ, ದಬ್ಬಾಳಿಕೆ ಹಾಗೂ ಪ್ರಾಬಲ್ಯದ ಬಗ್ಗೆ ಗಮನವನ್ನು ಕೇಂದ್ರೀಕರಿಸಿ, ತನ್ನ ಹಾಗೂ ಸಮಾಜದ ಬಗ್ಗೆ ವ್ಯವಸ್ಥಿತವಾದ ವಿಶ್ಲೇಷಣೆಯನ್ನು ಕೈಗೊಳ್ಳುವುದನ್ನು ನಾವು ವಿಮರ್ಶೆ ಎನ್ನುತ್ತೇವೆ. ವರ್ಗ-ಶೋಷಣೆಯ ಪರೀಕ್ಷಣೆಯು ವಿಮರ್ಶಾತ್ಮಕ ಬೋಧನಶಾಸ್ತ್ರದ ಬಹಳಷ್ಟು ಪ್ರತಿಪಾದಕರಿಗೆ ನಿರ್ಣಾಯಕವಾದುದಾದರೂ, ಜನಾಂಗ, ಜನಾಂಗೀಯತೆ ಹಾಗೂ ಲಿಂಗಾಧಾರಿತ ದಬ್ಬಾಳಿಕೆಗಳ ಪರಿಗಣನೆಯೂ ಅಷ್ಟೇ ಮುಖ್ಯವಾದುದು (Darder, Baltodano, ಮತ್ತು Torres 2003). ಈ ವಿಷಯಗಳನ್ನು ಅನ್ವೇಷಿಸುವಲ್ಲಿ ವೈಜ್ಞಾನಿಕ ವಿಧಾನದ ಗ್ರಹಿಕೆಯು ನಿರ್ಣಾಯಕವಾಗಿದೆ. ವಿಮರ್ಶಾತ್ಮಕ ಬೋಧನಶಾಸ್ತ್ರದ ಪ್ರತಿಪಾದಕರು ಅನುಭವವಾದಿ, ವಾಸ್ತವಿಕತಾವಾದಿ ಹಾಗೂ ಆಧುನಿಕೋತ್ತರ ಪ್ರಸ್ತಾವನೆಗಳನ್ನು ತಿರಸ್ಕರಿಸಿ, ವಿಜ್ಞಾನ ಹಾಗೂ ವಿಮೋಚನೆಯ ಜ್ಞಾನದ ಆಧಾರವಾಗಿ ಕಾರ್ಯಾನ್ವಯನವನ್ನು ಒಳಗೊಳ್ಳುವಂತಹ ಸಂಶೋಧನಕಾರ್ಯವನ್ನು ಸಂಶೋಧಕರು ಅನುಸರಿಸುವಂತಹ ವಿಮರ್ಶಾತ್ಮಕ ವಾಸ್ತವಿಕತಾವಾದಿ ಮಾದರಿಯನ್ನು ಪುರಸ್ಕರಿಸುತ್ತಾರೆ (Bhaskar 1997; Callinicos 1992; Collier 1994). ರಾಯ್ ಭಾಸ್ಕರ್ ಅವರ ಪ್ರಕಾರ, "ವಿಮರ್ಶಾತ್ಮಕ ವಾಸ್ತವತಾವಾದಿಗಳು ರಚನೆಗಳು ಹಾಗೂ ಸಾಮಾಜಿಕ ಚಟುವಟಿಕೆಯ ಪರಿವರ್ತನಾತ್ಮಕ ಪರಿಕಲ್ಪನೆಯನ್ನು ಆಧರಿಸಿದ ಮಾನವ ಮಾಧ್ಯಮಗಳ ನಡುವಿನ ಸಂಬಂಧದ ಕುರಿತಾದ ತಿಳುವಳಿಕೆಯ ಪರವಾಗಿ ವಾದಿಸುತ್ತಾರೆ" (1989: 2-3).

ಮೇಲೆ ಗಮನಿಸಿದಂತೆ, ವಿಮರ್ಶಾತ್ಮಕ ಬೋಧನಶಾಸ್ತ್ರವು ಮಧ್ಯಮವರ್ಗದ ಅಧಿನಾಯಕತ್ವಕ್ಕೆ ವಿರುದ್ಧವಾಗಿ ಪ್ರತಿ-ಅಧಿನಾಯಕತ್ವವೊಂದರ ಸೃಜನೆಯನ್ನು ಸಮರ್ಥಿಸುತ್ತದೆ. ವಿದ್ಯಾರ್ಥಿಗಳ ಜೀವನದಲ್ಲಿ ವರ್ಗ-ನಿಷೇಧಗಳ ಬಹಿರಂಗಪಡಿಸುವಿಕೆ, ಆಕ್ರಮಣಕಾರಿ ಚಿಂತನೆಗಳು ಹೇಗೆ ಅವರದೇ ಐಹಿಕ ಆಸಕ್ತಿಗಳಿಗೆ ಮಾರಕವಾಗಿ ಕೆಲಸ ಮಾಡುತ್ತವೆ ಎಂಬುದನ್ನು ತೋರಿಸುವುದರಿಂದ, ಈ ಸೃಜನೆಗೆ ಅವಕಾಶ ನೀಡಿದಂತಾಗುತ್ತದೆ. ಇದು ವಿರೋಧಿ ಮೌಲ್ಯಗಳು, ಮನೋಭಾವಗಳು, ಹಾಗೂ ವರ್ತನೆಗಳನ್ನು ಪ್ರೋತ್ಸಾಹಿಸುವಂತಹ ಪ್ರತಿಸಂಸ್ಕೃತಿಯೊಂದರ ಉದ್ವಿಕಾಸನವನ್ನೂ ಒಳಗೊಳ್ಳುತ್ತದೆ. ಹೀಗೆ, ವ್ಯಕ್ತಿವಾದ ಹಾಗೂ ಅರ್ಹತಾಪ್ರಭುತ್ವಗಳಿಗೆ (meritocracy) ಎದುರಾಗಿ ಸಮತಾವಾದ ಹಾಗೂ

ಸಮಾನಾವಕಾಶವಾದಗಳನ್ನು ಮಂಡಿಸಬಹುದು, ಹಾಗೆಯೇ ಅಧಿಕಾರಶಾಹಿ ಹಾಗೂ ಅಧಿಕಾರಶ್ರೇಣಿಯ ಪ್ರಕಾರಗಳಿಗೆ ಎದುರಾಗಿ ಪ್ರಜಾಸತ್ತಾತ್ಮಕ ಹಾಗೂ ಸಹಭಾಗಿತ್ವದ ಸ್ವರೂಪಗಳನ್ನು ಪ್ರಸ್ತುತಪಡಿಸಬಹುದು (Beyer 1996; Shor 1987).

ಕಾರ್ಯಾನ್ವಯನವು ಸಮಾಜದ ಪರಿವರ್ತನೆಯ ನಿಟ್ಟಿನ ಜ್ಞಾನದ ಯಥಾರ್ಥ ಅನ್ವಯನಕ್ಕೆ ಸಂಬಂಧಿಸಿದೆ. ಅದು ಸಮಾಜಶಾಸ್ತ್ರದ ಪಠ್ಯಕ್ರಮವನ್ನು ತರಗತಿಯ ಆಚೆಗೂ ಕೊಂಡೊಯ್ಯುತ್ತದೆ ಮತ್ತು ವಿಮರ್ಶಾತ್ಮಕ ಚಿಂತನೆಯನ್ನು ಸಮುದಾಯದ ಕ್ರಿಯೆಯೊಂದಿಗೆ ಸಂಯೋಜಿಸುತ್ತದೆ. ವಿಮರ್ಶಾತ್ಮಕ ಬೋಧನಶಾಸ್ತ್ರದ ದೃಷ್ಟಿಕೋನದಲ್ಲಿ, ಕಾರ್ಯಾನ್ವಯನವು ಸಾಮಾಜಿಕ ಪರಿವರ್ತನೆಗೆ ಸಂಬಂಧಿಸಿದಂತೆ ಸಾಮೂಹಿಕ ಪ್ರಯತ್ನಗಳಿಗೆ ಹೆಚ್ಚು ಸ್ಪಷ್ಟವಾದ ಪ್ರಾಶಸ್ತ್ಯವನ್ನು ನೀಡುವ ನಿಟ್ಟಿನಲ್ಲಿ, ಸೇವೆಗಾಗಿ ಕಲಿಕೆ ಅಥವಾ ಸಮುದಾಯ-ಆಧಾರಿತ ಸ್ವಯಂಸೇವಾವಾದದಿಂದ ಅಂತರವನ್ನು ಕಾಯ್ದುಕೊಳ್ಳುತ್ತದೆ. ಸಮುದಾಯ ಸಹಭಾಗಿತ್ವಕ್ಕೆ ಅವಕಾಶಮಾಡಿಕೊಡುವಂತಹ, ಸಾಕಷ್ಟು ತಲಸ್ಪರ್ಶಿಯಲ್ಲದ ಪ್ರಸ್ತಾವನೆಗಳು ಅಧಿಕಾರದ ವ್ಯವಸ್ಥೆಗಳನ್ನು ಎದುರಿಸುವ ನಿಟ್ಟಿನಲ್ಲಿ ರೂಪುಗೊಂಡಿರುವುದಿಲ್ಲ ಮತ್ತು ಅವು ವ್ಯಕ್ತಿವಾದದ ಒಂದು ಜಾಗತಿಕದೃಷ್ಟಿಯ ಪುನರ್‌ಸೃಜನೆಗೆ ಸಹ ಸಹಾಯಮಾಡಬಹುದು (Gimenez 1998). ಈ ಅರ್ಥದಲ್ಲಿ, ಸಮಾಜಶಾಸ್ತ್ರ ಪಠ್ಯಕ್ರಮದಲ್ಲಿ ಕಾರ್ಯಾನ್ವಯನವೆಂಬುದು ವ್ಯಕ್ತಿಗತ ಕಲಿಕೆಯ ಸಂಚಾಲನೆಯ ಉದ್ದಿಶ್ಯಗಳಿಗಿಂತಲೂ ಹೆಚ್ಚಿನ ಕಾಳಜಿ ಹೊಂದಿದ್ದು, ವ್ಯ ಕ್ತಿಯ ಸಮುದಾಯವನ್ನು ಪರಿವರ್ತಿಸುವಂತಹ ಹೆಚ್ಚುವರಿ ಧ್ಯೇಯವನ್ನು ಹೊಂದಿರುತ್ತದೆ (Feagin ಮತ್ತು Vera 2001).

ಸಮಾಜಶಾಸ್ತ್ರ ಪಠ್ಯಕ್ರಮದಲ್ಲಿ ವಿಮರ್ಶಾತ್ಮಕ ಬೋಧನಶಾಸ್ತ್ರದ ಈ ಅಂಶಗಳ ಅಳವಡಿಕೆಯು, ಅದರಲ್ಲೂ ವಿಶೇಷವಾಗಿ ಅನೇಕ ಕಾಲೇಜುಗಳು ಹಾಗೂ ವಿಶ್ವವಿದ್ಯಾನಿಲಯಗಳ ಸಾಂಸ್ಥಿಕ ನಿರ್ಬಂಧಗಳು ಎದುರಾದ ಸಂದರ್ಭಗಳಲ್ಲಿ, ಸವಾಲಿನಿಂದ ಕೂಡಿರಬಹುದು (Sweet 1998). ಪ್ರತಿಯೊಂದು ಅಧ್ಯಯನ ಸರಣಿಯಲ್ಲಿಯೂ ಈ ಒಂದೊಂದು ಘಟಕವನ್ನು ಸಮಾನವಾಗಿ ಪರಿಪಕ್ವಗೊಳಿಸುವುದು ಅಸಾಧ್ಯವಾಗುತ್ತದೆ. ವಾಸ್ತವವಾಗಿ, ನಿಷ್ಠರೆನಿಸಿದ ಬೋಧಕಸಿಬ್ಬಂದಿಗಳ ನಡುವೆ, ಸಹಕಾರ ಹಾಗೂ ಬದ್ಧತೆಯ ಪರಿಸ್ಥಿತಿಗಳಲ್ಲಿ ಪಠ್ಯಕ್ರಮದಾದ್ಯಂತ ವಿಮರ್ಶಾತ್ಮಕ ಬೋಧನಶಾಸ್ತ್ರವು ಉತ್ತಮವಾಗಿ ಸಾಧಿತವಾಗುತ್ತದೆಂಬುದನ್ನು ಗುರುತಿಸುವುದು ಮುಖ್ಯವಾಗುತ್ತದೆ.

ಕಳೆದ ಹತ್ತು ವರ್ಷಗಳಿಗಿಂತ ಹೆಚ್ಚು ಅವಧಿಯಲ್ಲಿ ನಾವು ನಮ್ಮ ಚಿಕ್ಕ ಸಮಾಜಶಾಸ್ತ್ರ ವಿಭಾಗದ (ಮೂವರು ಪೂರ್ಣಕಾಲಿಕ ಬೋಧಕ ಸದಸ್ಯರಿರುವ) ಪಠ್ಯಕ್ರಮವನ್ನು ವಿಮರ್ಶಾತ್ಮಕ ಬೋಧನಶಾಸ್ತ್ರದ ದಿಶೆಯಲ್ಲಿ ಕ್ರಮೇಣವಾಗಿ ಕೊಂಡೊಯ್ದಿದ್ದೇವೆ. ಉದಾಹರಣೆಗೆ, ನಾವು ಶಿಕ್ಷಣ ಹಾಗೂ ಸಮದಾಯ ಕ್ರಿಯೆಗಳನ್ನು ಒಂದುಗೂಡಿಸುವಂತಹ ಅನೇಕ ಅಧ್ಯಯನಸರಣಿಗಳು ಹಾಗೂ ಅಧ್ಯಯನ ಅನುಕ್ರಮಗಳನ್ನು ಸಂವರ್ಧಿಸಿದ್ದೇವೆ. Latino ಪ್ರೌಢಶಾಲೆಯ ವಿದ್ಯಾರ್ಥಿಗಳ ಜೊತೆಗಿನ ಒಂದು ವಿಸ್ತೃತ ಮಾರ್ಗದರ್ಶನ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳ ಸಹಭಾಗಿತ್ವ, ಶ್ರಮಿಕ ಸಂಘಟನೆಗಳೊಂದಿಗೆ ಸೇವೆ ಹಾಗೂ ಪ್ರಶಿಕ್ಷಣಗಳು, ವಿಭಾಗದ ಆವರಣದ ಒಳಗೆ ಹಾಗೂ ಹೊರಗೆ ಶ್ರಮಿಕ ಶ್ರಮದಾಯಕ ಬಳಕೆವ್ಯಾಪಾರ-ವಿರೋಧಿ (anti-sweatshop) ಚಟುವಟಿಕೆಗಳ ಸಂಘಟನೆ ಹಾಗೂ ಜಾರಿ, ಆವರಣದ ಒಳಗೆ ವಲಸೆ ಕಾರ್ಮಿಕರ ಪರವಾಗಿ ಆಹಾರ ಸೇವೆಯ ಬಹಿಷ್ಕಾರದ ಸಂಘಟನೆ ಮತ್ತು ಜಾಗತೀಕರಣವಿರೋಧಿ ವೇದಿಕೆಗನ್ನೊಳಗೊಂಡಂತೆ, ಕಾರ್ಯಾನ್ವಯನದ ಬಹುವಿಧದ ಹಾಗೂ ಚಾಲ್ತಿಯಲ್ಲಿರುವ ಪ್ರಕಾರಗಳಿಗೆ ತರಗತಿಗಳನ್ನು ವೇದಿಕೆಯಾಗಿ ನಾವು ಬಳಸಿದ್ದೇವೆ.

ಈ ಒಂದೊಂದು ಯೋಜನೆಯಲ್ಲಿಯೂ ಸಂವಾದ, ವಿಮರ್ಶೆ, ಪ್ರತಿ-ಅಧಿನಾಯಕತ್ವ ಹಾಗೂ ಕಾರ್ಯಾನ್ವಯನಗಳಿಗೆ ಅವಕಾಶಮಾಡಿಕೊಡುವ ಮೂಲಕ ವಿಮರ್ಶಾತ್ಮಕ ಬೋಧನಶಾಸ್ತ್ರದ ತತ್ತ್ವಗಳನ್ನು ಕಾರ್ಯರೂಪಕ್ಕೆ ತರಲು ನಾವು ಪ್ರಜ್ಞಾಪೂರ್ವಕವಾಗಿ ಪ್ರಯತ್ನಿಸಿದ್ದೇವೆ. ದುರದೃಷ್ಟವಶಾತ್ ಸೀಮಿತ ಸ್ಥಳಾವಕಾಶದಿಂದಾಗಿ ಈ ವಲಯಗಳಲ್ಲಿನ ನಮ್ಮ ಎಲ್ಲಾ ಪ್ರಯತ್ನಗಳ ಸವಿಸ್ತಾರ ಪರೀಕ್ಷಣೆಯು ಸಾಧ್ಯವಾಗುತ್ತಿಲ್ಲ. ಹಾಗಿದ್ದರೂ, ವಿಮರ್ಶಾತ್ಮಕ ಬೋಧನಶಾಸ್ತ್ರದ ಮುಖ್ಯ ಪರಿಕಲ್ಪನೆಗಳನ್ನು ರೂಪಿಸಲು ಹಾಗೂ ಕಾರ್ಯರೂಪಕ್ಕೆ ತರಲು ಸಮಾಜಶಾಸ್ತ್ರದ ಯೋಜನೆಯೊಂದನ್ನು ಹೇಗೆ

ಬಳಸಬಹುದೆಂಬುದನ್ನು ತೋರ್ಪಡಿಸಿ, "ಸಮುದಾಯ ಸಂಘಟನೆಯಲ್ಲಿ" ನಮ್ಮ ಅಧ್ಯಯನ ಅನುಕ್ರಮದ ಒಂದು ಐತಿಹಾಸಿಕ ಮೇಲ್ನೋಟದೊಂದಿಗೆ, ವಿಮರ್ಶಾತ್ಮಕ ಬೋಧನಶಾಸ್ತ್ರದ ಅನೇಕ ತತ್ತ್ವಗಳನ್ನು ನಾವು ವಿಶದಪಡಿಸಬಲ್ಲೆವು.

**ಸಮುದಾಯ ಸಂಘಟನೆ ಹಾಗೂ ತರಗತಿ**

> "ಹಾಸಿಗೆಯ ಕೆಳಗೆ ಕೆಂಪು ಬೆಂಕಿಯನ್ನು, ಅಂದರೆ ಅದರ ಬಣ್ಣವನ್ನು, ಕಂಡೆ. ನಾನು ಹೊರಬಂದದ್ದು ಆಗಲೇ." ಕೆಡಿಲ್ಲೋ ಒಂದು ಅಗ್ನಿಶಾಮಕವನ್ನು ಥಕ್ಕನೆ ಹಿಡಿದುಕೊಂಡ, ಆದರೆ ಅದು ಕೆಲಸ ಮಾಡಲಿಲ್ಲ. "ನಾನು ಕೊಠಡಿಗೆ ಹಿಂತಿರುಗುತ್ತಿದ್ದಂತೆಯೇ ಅದು ಬೆಂಕಿಯಲ್ಲಿ ಉರಿದುಹೋಯಿತು."

> "ನನಗೆ ಆ ಬೆಂಕಿಯ ಬಗ್ಗೆ ಕೇಳಿಬಂದಾಗ, ಅದು ಒಂದು ದೊಡ್ಡ... 'ನಾನು ನಿನಗೆ ಹೇಳಿದ್ದೆನಲ್ಲಾ ಹಾಗೆ'. ಎಂದಳು ಪೂಲ್ಸಿ. ಅವರು ಕೇಳಿಸಿಕೊಳ್ಳಲೇ ಇಲ್ಲ." (Granvelle 1999:A1)

ಒಂದು ಪ್ರಮುಖ ಮಹಾನಗರದ ವಾರ್ತಾಪತ್ರಿಕೆಯ ಮುಖಪುಟದಲ್ಲಿನ "Students Form Tenants Union" ಎಂಬ ಶೀರ್ಷಿಕೆಯುಳ್ಳ ಎರಡು ಪುಟಗಳ ಕಥೆಯಿಂದ ಮೇಲಿನ ವಾಕ್ಯಗಳನ್ನು ಉದ್ಧರಿಸಿಸಲಾಗಿದೆ. ಪಶ್ಚಿಮ ಒರೆಗಾನ್ ವಿಶ್ವವಿದ್ಯಾನಿಲಯದ ಆವರಣದಲ್ಲಿ ಮಾರಣಾಂತಿಕವಾಗಬಹುದಾಗಿದ್ದ ಅಗ್ನಿ ಅನಾಹುತವೊಂದನ್ನು ಇದು ವರ್ಣಿಸುತ್ತದೆ. ಅಗ್ನಿಗೆ ಆಹುತಿಯಾದ ಸಂಕೀರ್ಣದ ಪೂರ್ವ ನಿವಾಸಿ ಹಾಗೂ ವಿದ್ಯಾರ್ಥಿಯಾಗಿದ್ದ ಪೂಲ್ಸಿಯು ಆ ಕಟ್ಟಡದಲ್ಲಿ ಸಂಭವನೀಯ ಅಗ್ನಿ ಅಪಾಯಗಳ ಬಗ್ಗೆ ವಿಶ್ವವಿದ್ಯಾನಿಲಯದ ಆಡಳಿತಕ್ಕೆ ಪದೇ ಪದೇ ಎಚ್ಚರಿಕೆ ನೀಡಿದ್ದನಲ್ಲದೆ, ನೂತನ ಸಮುದಾಯ ಸಂಘಟನೆಯ ಒಬ್ಬ ಸಕ್ರಿಯ ಸದಸ್ಯನೂ ಆಗಿದ್ದ.

ಸಮುದಾಯ ಸಂಘಟನೆಯನ್ನು ಕುರಿತ ನಮ್ಮ ಸಮಾಜಶಾಸ್ತ್ರ ಅಧ್ಯಯನ ಸರಣಿಯಲ್ಲಿನ ವಿದ್ಯಾರ್ಥಿಗಳು ಕೊನೆಗೊಮ್ಮೆ ಮುದ್ರಣ, ಆಕಾಶವಾಣಿ ಹಾಗೂ ದೂರದರ್ಶನಗಳಲ್ಲಿ ರಾಜ್ಯಮಟ್ಟದ ಪ್ರಸಾರವನ್ನು ಪಡೆದ ಪತ್ರಿಕಾ ಪ್ರಕಟಣೆಯೊಂದನ್ನು ಬರೆದು ಹಂಚುವವರೆಗೂ ಈ ಕಥೆಯು ಮುದ್ರಣಾಲಯದ ಗಮನವನ್ನೇ ಸೆಳೆಯಲಿಲ್ಲವೆಂಬ ಕಾರಣದಿಂದಾಗಿ ಪ್ರಾಸಂಗಿಕವೆನಿಸಿದೆ. ವಾಸ್ತವವಾಗಿ, ಈ ಕಥೆಯಲ್ಲಿ ಹೇಳಲಾದ ಬಾಡಿಗೆದಾರರ ಸಂಘವನ್ನು ಇದೇ ಸಮಾಜಶಾಸ್ತ್ರ ಅಧ್ಯಯನ ಸರಣಿಯಲ್ಲಿ ಒಂದು ವರ್ಷದ ಹಿಂದೆ ಸ್ಥಾಪಿಸಲಾಗಿತ್ತು. ತಮ್ಮ ಸಮುದಾಯವನ್ನು ಮೂಲಭೂತವಾಗಿ ಪ್ರಮುಖವೆನಿಸಿದ ವಿಧಾನಗಳಲ್ಲಿ ಪರಿವರ್ತಿಸುವ ನಿಟ್ಟಿನಲ್ಲಿ ವಿದ್ಯಾರ್ಥಿಗಳನ್ನು ಹೇಗೆ ಸಶಕ್ತಗೊಳಿಸಬಹುದು ಎಂಬುದಕ್ಕೆ ಇದೊಂದು ಪ್ರಭಾವಶಾಲಿಯಾದ ವಿವರಣೆಯೆನಿಸಿದೆ. ಸಮುದಾಯ ಬಾಡಿಗೆದಾರರ ಸಂಘಟನೆಯೊಂದರ ಅಭಿವೃದ್ಧಿಗೆ ದಾರಿಮಾಡಿಕೊಟ್ಟ ನಮ್ಮ ಅಧ್ಯಯನ ಅನುಕ್ರಮವನ್ನು ಈ ವಿಭಾಗದಲ್ಲಿ ನಾವು ವಿವರಿಸುತ್ತೇವೆ. ಇದರಿಂದ ಮೂಡುವ ವಿಚಾರವು ಯಾವುದೇ ನಿರ್ದಿಷ್ಟ ಅಧ್ಯಯನ ಸರಣಿಯ ರಚನೆಯ ಅಭಿವೃದ್ಧಿಗೆ ಒಂದು ನೀಲಿನಕ್ಷೆಯೆಂಬ ರೀತಿಯಲ್ಲಿ ಉದ್ದೇಶಿಸಲಾಗದು; ಸದಾ ಒಂದೇ ರೀತಿಯ ಮಾರ್ಗ ಅಥವಾ ರೀತಿಯನ್ನು ಬಳಸುತ್ತಾ, ವ್ಯಕ್ತಿಗತ ಭಿನ್ನತೆಗಳಿಗೆ ಯಾವುದೇ ರೀತಿಯಲ್ಲಿ ಗಮನಹರಿಸದ ದೃಷ್ಟಿಕೋನವು ಮುಖ್ಯವಾದ ಬದಲಾವಣೆಗೆ ಸಾಧನವಾಗಲಾರದು. ಬದಲಿಗೆ ವಿಮರ್ಶಾತ್ಮಕ ಬೋಧನಶಾಸ್ತ್ರದ ಅನ್ವಯನವು ಪರಿವರ್ತನೆಯನ್ನು ತರಲು ಯಾವ ರೀತಿಯ ಅಂತಸ್ಸತ್ವವನ್ನು ಹೊಂದಿದೆ ಎಂಬುದಕ್ಕೆ ನಮ್ಮ ಈ ನಿರ್ದಿಷ್ಟ ಅನುಭವವನ್ನು ಒಂದು ದೃಷ್ಟಾಂತವಾಗಿ ಮುಂದಿಡುತ್ತೇವೆ.

ನಮ್ಮ ಪಠ್ಯಕ್ರಮದಲ್ಲಿ ಚಿರಸ್ಥಾಯಿಯಾಗಬಲ್ಲ ಕಾರ್ಯಾನ್ವಯನದ ಅಂಶವನ್ನು ಸ್ಥಾಪಿಸುವ ಗುರಿಯೊಂದಿಗೆ ಏಳು ವರ್ಷಗಳ ಹಿಂದೆಯೇ ನಮ್ಮ ಈ ಕಾರ್ಯಯೋಜನೆಯು ಆರಂಭವಾಯಿತು. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ವಿದ್ಯಾರ್ಥಿಗಳು ಸಮಾಜಶಾಸ್ತ್ರೀಯ ಜ್ಞಾನವನ್ನು ಸಮಾಜದ ಪರಿವರ್ತನೆಗಾಗಿ ಅನ್ವಯಿಸಲು ಒಂದು ಅವಕಾಶ ಕಲ್ಪಿಸಿಕೊಡಬೇಕೆಂದು ನಾವು ಬಯಸಿದೆವು. ಆದರೆ ಒಂದು ಸಮುದಾಯದಲ್ಲಿನ ಆಕ್ರಮಣಕಾರಿ ವ್ಯವಸ್ಥೆಗಳನ್ನು ಬದಲಾಯಿಸುವುದು ಎಂದೂ ಸುಲಭವಲ್ಲ, ಮತ್ತು ವಿಭಿನ್ನ ಹಿನ್ನೆಲೆಯ ತಾತ್ಕಾಲಿಕ ವಿದ್ಯಾರ್ಥಿಗಳ ಸಣ್ಣ ಗುಂಪಿನೊಂದಿಗೆ, ಪರಿಮಿತವಾದ ಅವಧಿ ಬದ್ಧತೆ ಹಾಗೂ ಸ್ವಲ್ಪವೇ ಸಂಪನ್ಮೂಲಗಳೊಂದಿಗೆ, ಇದು ಮತ್ತಷ್ಟು ಕಷ್ಟಕರ. ಇಷ್ಟೆಲ್ಲ ಇದ್ದರೂ, ಸಮುದಾಯ ಸಂಘಟನೆಯನ್ನು ಕುರಿತ ಅಧ್ಯಯನ

ಅನುಕ್ರಮದಲ್ಲಿ ತರಬೇತಿ ಹಾಗೂ ಸಲಹೆಗಳನ್ನು ಪಡೆದ ವಿದ್ಯಾರ್ಥಿಗಳು ಸಂಘಟಿಸಿ ನಿರ್ದೇಶಿಸಿದಂತಹ ಜನಸಾಮಾನ್ಯರ ಬಾಡಿಗೆದಾರರ (ಗೇಣಿದಾರರ) ಸಂಘದ ಅಭಿವೃದ್ಧಿಯಿಂದಾಗಿ ನಮಗೆ ನಿಜವಾದ ಯಶಸ್ಸು ಸಿಕ್ಕಿದಂತಾಯಿತು. 1998ರಿಂದಲೂ ಈ ಬಾಡಿಗೆದಾರರ ಸಂಘವು ಬೇರೆ ಬೇರೆ ರೀತಿಗಳಲ್ಲಿ ಬಾಡಿಗೆದಾರರನ್ನು ಸಶಕ್ತಗೊಳಿಸಿದ್ದು, ಅಧಿನಾಯಕತ್ವ ಶೈಲಿಯ ಚಿಂತನೆಗಳನ್ನು ಬಹಿರಂಗಪಡಿಸಿದೆಯಲ್ಲದೆ, ಶೋಷಣೆಯ ಕೆಲವು ಅಭ್ಯಾಸಗಳನ್ನು ಬದಲಾಯಿಸಿದೆ.

ಔಪಚಾರಿಕವಾದ ಪಠ್ಯಕ್ರಮದ ಯೋಜನೆಯು, ಶರತ್ಕಾಲದ ಅವಧಿಯ ಎಸ್‌ಓಸಿ (SOC) 340: Community organizingನಲ್ಲಿ (ಸಮುದಾಯ ಸಂಘಟನೆ) ಸುಮಾರು 35 ವಿದ್ಯಾರ್ಥಿಗಳನ್ನು ನೋಂದಾಯಿಸಿಕೊಂಡು [ಪೂರ್ವಾಗತ್ಯಗಳಿಲ್ಲದೆ (prerequisite)] ಪ್ರಾರಂಭವಾಗುತ್ತದೆ. ಎಸ್‌ಓಸಿ 340ರಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು ಅನಂತರ ಚಳಿಗಾಲದ ಅವಧಿಯಲ್ಲಿ ನೀಡಲಾಗುವ ಎಸ್‌ಓಸಿ 341: Community Actionನಲ್ಲಿ ನೋಂದಾಯಿಸಿಕೊಳ್ಳಬಹುದು. Community organizing ಮತ್ತು Community Action ಇವೆರಡರಲ್ಲೂ ಉತ್ತೀರ್ಣರಾದ ವಿದ್ಯಾರ್ಥಿಗಳು ವಸಂತ ಋತು ಹಾಗೂ ಬೇಸಿಗೆಯ ಅವಧಿಗಳಲ್ಲಿ "ಸ್ವತಂತ್ರ ಅಧ್ಯಯನದ" ಅಧ್ಯಯನ ಸರಣಿಗಳಿಗೆ ನೋಂದಾಯಿಸಿಕೊಳ್ಳುವ ಮೂಲಕ ಹೆಚ್ಚುವರಿ ಶೈಕ್ಷಣಿಕ ಅಂಕಗಳನ್ನು ಸಂಪಾದಿಸಲು ಅರ್ಹರಾಗುತ್ತಾರೆ. ಈ ಅನುಕ್ರಮವನ್ನು ಪೂರೈಸಿದ ವಿದ್ಯಾರ್ಥಿಗಳು ಮುಂದಿನ ವರ್ಷದಲ್ಲಿ ಅಧ್ಯಯನ ಸರಣಿಯು ಪುನರಾವರ್ತನೆಯಾದಾಗ, ಬಾಡಿಗೆದಾರರ ಸಂಘದ ನಿರ್ದೇಶನ ಮಾಡುವಂತಹ ಮತ್ತು ಬೋಧಕ ಸಿಬ್ಬಂದಿಗೆ ಸಹಾಯಕರಾಗುವಂತಹ "ಪರಿಣತ ಸಂಘಟಕರಾಗುತ್ತಾರೆ." ವರ್ಷದಿಂದ ವರ್ಷಕ್ಕೆ ಸಂಚಿತ ಶಕ್ತಿಯೊಂದರ ನೆಲೆಗೊಳ್ಳುವಿಕೆಯ ಅಭಿವೃದ್ಧಿಗೆ ಕೊಡುಗೆ ನೀಡುವಂತಹ ರೀತಿಯಲ್ಲಿ ವಿದ್ಯಾರ್ಥಿಗಳ ಚಟುವಟಿಕೆಗಳು ಸಂಪರ್ಕಿತಗೊಳ್ಳುತ್ತವೆ ಎಂಬುದು ಇಂತಹ ರಚನೆಯ ಒಂದು ವಿಶಿಷ್ಟ ಶಕ್ತಿಯಾಗಿದೆ.

**ಸಂವಾದ ಪ್ರಕ್ರಿಯೆ ಮತ್ತು ಅನುಭವಾಧಾರಿತ ಜ್ಞಾನ**

ಶರತ್ಕಾಲದ ಅವಧಿಯನ್ನು ವಿದ್ಯಾರ್ಥಿಗಳು ಆರಂಭದಲ್ಲಿ ಯಾವುದೇ ವಿಶ್ವವಿದ್ಯಾನಿಲಯದ ಅಧ್ಯಯನ ಸರಣಿಗಳಂತೆಯೇ ಕಾಣುವ ತರಗತಿ ಅನುಭವದೊಂದಿಗೆ ಆರಂಭಿಸುತ್ತಾರೆ (ಔಪಚಾರಿಕ ಪಠ್ಯವಸ್ತು, ಪಠ್ಯಪುಸ್ತಕಗಳು, ಹಾಗೂ ಸರ್ವತ್ರ ಪ್ರಚಲಿತ ಉಪನ್ಯಾಸದ ನಮೂನೆ). ಆದರೆ, ಹತ್ತು ವಾರಗಳ ಅವಧಿಯ ನಂತರ, ಈ ಔಪಚಾರಿಕ ರಚನೆಯು ಕ್ರಮೇಣ ಬಾಡಿಗೆದಾರರಾಗಿ ಸರ್ವಸಾಮಾನ್ಯ ಅನುಭವಗಳು, ಭೂಮಾಲೀಕ-ಬಾಡಿಗೆದಾರರ ನಡುವಿನ ಸಂಬಂಧದಲ್ಲಿನ ಶೋಷಕ (exploitative) ಪ್ರವೃತ್ತಿ, ಮತ್ತು ಪರಿವರ್ತನೆಯ ನಿಟ್ಟಿನ ಸಂಭಾವ್ಯ ಪರಿಹಾರೋಪಾಯಗಳ ಕಡೆಗೆ ಗಮನವನ್ನು ಕೇಂದ್ರೀಕರಿಸುವ ವಿದ್ಯಾರ್ಥಿ-ಕೇಂದ್ರಿತ ಸಂವಾದವಾಗಿ ವಿಕಾಸಗೊಳ್ಳುತ್ತದೆ.

ಈ ಅವಧಿಯ ಮೊದಲ ಕೆಲವು ವಾರಗಳಲ್ಲಿ, ನಿರ್ದೇಶಿತ ಓದು ಹಾಗೂ ಚರ್ಚೆಗಳು, ಅಮೆರಿಕಾ ಸಂಯುಕ್ತ ರಾಜ್ಯದಲ್ಲಿನ ಸಮುದಾಯ ಸಂಘಟನೆಯ ಇತಿಹಾಸ ಹಾಗೂ Saul Alinsky ಅವರ ನಿರ್ದಿಷ್ಟ ತತ್ತ್ವಶಾಸ್ತ್ರ ಹಾಗೂ ಅನುಭವಗಳನ್ನು ಒಳಗೊಳ್ಳುತ್ತವೆ. ಏಲಿನ್ಸ್ಕಿ ಯವರ ಬಗ್ಗೆ ಹಾಗೂ ಅವರ ಸಂಘಟನೆಯ ಶೈಲಿಯತ್ತ ಗಮನಹರಿಸುವುದು ಅನೇಕ ಕಾರಣಗಳಿಗಾಗಿ ಪರಿಣಾಮಕಾರಿಯಾಗಿದೆ ಎಂದು ನಮಗೆ ಕಂಡಿದೆ. ಮೊದಲನೆಯದಾಗಿ, ಅವರ ಬರಹವು ಅತ್ಯಂತ ಪ್ರಚೋದನಕಾರಿಯಾಗಿದ್ದು, ಸಮಾಜಶಾಸ್ತ್ರೀಯ ನಿಲುವನ್ನು ಹೊಂದಿರುವುದಲ್ಲದೆ, ವಿದ್ಯಾರ್ಥಿಗಳಿಗೆ ಸುಲಭವಾಗಿ ನಿಲುಕುವಂತಿದೆ (Alinsky 1969, 1971). ಎರಡನೆಯದಾಗಿ, ವಿವಿಧ ತರಬೇತಿ ಸಂಪನ್ಮೂಲಗಳು ಹಾಗೂ ಯಶಸ್ವೀ ಸಂಘಟನೆಯ ಪ್ರಯತ್ನಗಳ ದೃಷ್ಟಾಂತಗಳು ಏಲಿನ್ಸ್ಕಿ ಯವರ ಕೈಗಾರಿಕಾ ವಲಯಗಳ ಪ್ರತಿಷ್ಠಾನಕ್ಕೆ (Industrial Areas Foundation) ಸಂಪರ್ಕಿತಗೊಂಡಿದ್ದು, (ಉದಾಹರಣೆಗೆ ನೋಡಿ: http://www.industrialareasfoundation.org), ಆ ಮೂಲಕ ವಿದ್ಯಾರ್ಥಿಗಳಿಗೆ ಜನಸಾಮಾನ್ಯರ ಯಶಸ್ವೀ ಸಬಲೀಕರಣದ ಮಾದರಿಗಳನ್ನು ಒದಗಿಸುತ್ತವೆ. ಮತ್ತು ಅತಿ ಮುಖ್ಯವಾಗಿ, ಏಲಿನ್ಸ್ಕಿ ಯವರ ಸಂಘಟನೆಯ ಶೈಲಿಯು ತೀವ್ರಗಾಮಿ ಪ್ರಜಾಪ್ರಭುತ್ವ, ಸಮಾನ ಆಸಕ್ತಿಯ ನಾಗರಿಕರ ನಡುವೆ ಸಂವಾದ, ಹಾಗೂ ವೈಯಕ್ತಿಕ ತೊಂದರೆಗಳು ಹಾಗೂ ಸಾಮಾಜಿಕ ಸಮಸ್ಯೆಗಳ ನಡುವಿನ ಸಂಬಂಧದ ಕುರಿತ ಚರ್ಚೆ - ಇವುಗಳಿಗೆ ಅನುಕೂಲವನ್ನು ಒದಗಿಸುತ್ತದೆ. (ಹೋಲಿಸಿ: Feagin and Vera 2001).

ಸಾಮಾಜಿಕ ಸಮಸ್ಯೆಗಳನ್ನು ಕುರಿತ ಸಾರ್ವಜನಿಕ ಸಂವಾದಗಳ ಬಗ್ಗೆ ವಿದ್ಯಾರ್ಥಿಗಳಿಗೆ ಪರಂಪರಾನುಗತವಾಗಿ ಹೆಚ್ಚಿನ ಅನುಭವವಿಲ್ಲದೆ, ತಾವು ಆ ಕುರಿತ ತಜ್ಞರಲ್ಲ ಎಂಬ ಭಾವನೆಯಿರುವಾಗ, ಅವರು ಆರಂಭದಲ್ಲಿ ವಿಷಯಗಳ ಬಗ್ಗೆ ಮುಕ್ತ ಚರ್ಚೆಯಲ್ಲಿ ಅನಿರ್ಬಂಧಿತವಾಗಿ ಭಾಗವಹಿಸಲು ಹಿಂಜರಿಯುತ್ತಾರೆ. ಆದರೂ, ಸಂವಾದವು ವಿದ್ಯಾರ್ಥಿಯ ವೈಯಕ್ತಿಕ ಅನುಭವವನ್ನು, ಅದರಲ್ಲೂ ವಿಶೇಷವಾಗಿ ಶೋಷಣೆಗೆ ಸಂಬಂಧಿಸಿದ ಅನುಭವವನ್ನು ಕೇಂದ್ರೀಕರಿಸಿದ್ದಾಗ, ಅದು ನಿರ್ದಿಷ್ಟವಾಗಿ ಪ್ರಬಲವೂ, ಸಕೇಂದ್ರಿತವೂ (focused), ಫಲದಾಯಕವೂ ಆಗಿರುವುದನ್ನು ನಾವು ಕಂಡಿದ್ದೇವೆ.

ಏಳು ವರ್ಷಗಳ ಹಿಂದೆ ನಾವು ಸಮುದಾಯ ಸಂಘಟನೆಯ ಅನುಕ್ರಮವನ್ನು ಪ್ರಾರಂಭಿಸಿದಾಗ, ಪರಿಹಾರವನ್ನು ಬಯಸುವಂತಹ ಒಂದು ಸರ್ವಸಾಮಾನ್ಯ ಸಂಗತಿ ಅಥವಾ ಸಮಸ್ಯೆಯನ್ನು ಗುರುತಿಸಲು ಮೊದಲಿಗೆ ವಿದ್ಯಾರ್ಥಿಗಳನ್ನು ನಿಯುಕ್ತಗೊಳಿಸಿದೆವು. ಇದು ಸಣ್ಣ ಗುಂಪುಗಳಲ್ಲಿ ಆರಂಭವಾಯಿತಾದರೂ, ಅಂತಿಮವಾಗಿ, ಇಡೀ ತರಗತಿಯ ಒಂದು ಮುಕ್ತ ವೇದಿಕೆಯನ್ನು ಮತ್ತು ಅವರ ಜೀವನದಲ್ಲಿನ ಹತಾಶೆ, ಕೋಪ, ಅಸಂತುಷ್ಟಿ ಹಾಗೂ ಅಧಿಕಾರಶೂನ್ಯತೆಯ ವಿಶಾಲ-ವ್ಯಾಪ್ತಿಯ ಅಭಿವ್ಯಕ್ತಿಯ ಲಕ್ಷಣಗಳನ್ನು ಒಳಗೊಂಡಿತು. ಪ್ರಾರಂಭಿಕ ಚರ್ಚೆಗಳು, ಒಮ್ಮತಕ್ಕೆ ಬರುವಲ್ಲಿ ವಿಫಲಗೊಂಡ ಮಹತ್ವದ ಸಂಗತಿಗಳತ್ತ ಸಕೇಂದ್ರಿತವಾಗಿದ್ದವು (ಉದಾಹರಣೆಗೆ, ಬಂದೂಕು ನಿಯಂತ್ರಣ, ಗರ್ಭಪಾತ, ಮತ್ತು ಸ್ವೀಕಾರಾತ್ಮಕ ಕ್ರಿಯೆ) ಮತ್ತು ಭಾವನಾತ್ಮಕ ಹಾಗೂ ನಿಂದಾತ್ಮಕ ಸಾರ್ವಜನಿಕ ಅಸಮ್ಮತಿಯಿಂದಾಗಿ, ಹೆಚ್ಚಿನ ವಿದ್ಯಾರ್ಥಿಗಳು ಮೌನವಾಗಿರುತ್ತಿದ್ದರು ಅಥವಾ ಇದು ಅವರಿಗೆ ಅಹಿತಕರವೆನಿಸುತ್ತಿತ್ತು. ಆದಾಗ್ಯೂ, ವಿದ್ಯಾರ್ಥಿಗಳು ತಮ್ಮ ಸಹಭಾಜಿತ (shared) ಅನುಭವದಲ್ಲಿನ ಸಮಾನ ಸಂಗತಿಯನ್ನು ಕಂಡುಕೊಳ್ಳಬೇಕೆಂದು ಬೋಧಕರು ಹಲವಾರು ವಾರಗಳವರೆಗೆ ನಿಯತವಾಗಿ ನಿರ್ದೇಶಿಸತೊಡಗಿದಾಗ ಇದು ಬದಲಾಯಿತು. ಕೊನೆಗೆ, ಧರ್ಮ, ಲಿಂಗ, ಲೈಂಗಿಕ ಒಲವು, ರಾಜಕೀಯ, ಜನಾಂಗೀಯತೆ, ವಯಸ್ಸು, ಜೀವನಶೈಲಿ ಮತ್ತು ವ್ಯಕ್ತಿತ್ವಗಳ ಗಮನಾರ್ಹ ವ್ಯತ್ಯಾಸಗಳನ್ನು ತಾತ್ಕಾಲಿಕವಾಗಿ ಮೀರಿ (ಪರಿಸರದ ಒಳಗೆ ಹಾಗೂ ಹೊರಗೆ ಎರಡೂ ಕಡೆಯ), ಅವರು ಬಾಡಿಗೆ ಮನೆವಾಸದ ಅನುಭವವನ್ನು ಅತ್ಯಂತ ಜ್ವಲಂತ ಸರ್ವಸಾಮಾನ್ಯ ಸಮಸ್ಯೆ ಎಂದು ಗುರುತಿಸಿದರು. ಸಮುದಾಯಕ್ಕೆ ಒಂದು ಜನಸಾಮಾನ್ಯರ ಬಾಡಿಗೆದಾರರ ಸಂಘವು ಬೇಕೆಂದು ಮೊದಲನೆಯ ಅವಧಿಯ ಕೊನೆಗೆ ವಿದ್ಯಾರ್ಥಿಗಳು ಉತ್ಸಾಹಪೂರ್ವಕವಾಗಿ ಒಪ್ಪಿಕೊಂಡರು.

ಸಂಘದ ಸ್ಥಾಪನೆಗೆ ಅನುವುಮಾಡಿಕೊಟ್ಟ ಸಂವಾದವು ಕೆಲವೊಮ್ಮೆ ನಿರಾಶಾದಾಯಕವಾಗಿದ್ದು,, ಆಗಾಗ ಅವ್ಯವಸ್ಥಿತ ಹಾಗೂ ಹಲವು ವೇಳೆ ಅಸಂಘಟಿತವಾಗಿತ್ತಾದರೂ, ಸದಾ ಕ್ರಿಯಾಶೀಲವಾಗಿತ್ತು. ಈ ಪ್ರಕ್ರಿಯೆಯನ್ನು ಪ್ರತಿ ವರ್ಷ ಪುನರಾವರ್ತಿಸುವುದು ಕಷ್ಟ. ಅಂತಹ ಮೂಲತಃ ಪ್ರಜಾಸತ್ತಾತ್ಮಕ ವಿಧಾನವನ್ನು ಅನುಭವಿಸುವುದು ಮಹತ್ವಪೂರ್ಣವೆನಿಸಿದಾಗ್ಯೂ, ಅದರ ಗುರಿಯು ಒಂದು ಸಂಘಟಿತ ಸಮುದಾಯ ಕಾರ್ಯಯೋಜನೆಯ ಪೋಷಣೆಯಷ್ಟೇ ಎಂದಾದರೆ, ಅದು ಪ್ರಯೋಗಯೋಗ್ಯವಲ್ಲ. ಅದರ ಪರಿಣಾಮವಾಗಿ, ಮುಂದಿನ ವರ್ಷಗಳಲ್ಲಿ, ಈಗಾಗಲೇ ಸ್ಥಾಪಿತವಾಗಿರುವ ಬಾಡಿಗೆದಾರರ ಸಂಘದ ಕೆಲಸವನ್ನು ಮುಂದುವರಿಸುವ ನಿರೀಕ್ಷೆಯೊಂದಿಗೆ ಪ್ರತಿಯೊಂದು ಹೊಸ ವಿದ್ಯಾರ್ಥಿ ದಳವೂ ಆರಂಭಗೊಳ್ಳುತ್ತದೆ. ಇತ್ತೀಚಿನ ದಿನಗಳಲ್ಲಿ ನಮ್ಮ ಅಧ್ಯಯನ ಸರಣಿಯು ವಿದ್ಯಾರ್ಥಿ ಸಂವಾದಕ್ಕೆ ಅನುಕೂಲವನ್ನು ಒದಗಿಸುತ್ತದೆಯಾದರೂ, ಅದು ಸಂಸ್ಥೆಗೆ ಸಂಬಂಧಿಸಿದ ಸಂಗತಿಗಳು, ಗುರಿಗಳು ಹಾಗೂ ಕಾರ್ಯನೀತಿಗಳ ಕಡೆಗೆ ಗಮನಹರಿಸುತ್ತದೆ.

**ವಿಮರ್ಶಾತ್ಮಕ ವಿಶ್ಲೇಷಣೆ ಮತ್ತು ಸಮುದಾಯ ಸಂಪರ್ಕ**

ಮೊದಲನೆಯ ಅವಧಿಯ ಕೊನೆಯ ಹೊತ್ತಿಗೆ, ವಿದ್ಯಾರ್ಥಿಗಳು ಓದು ಹಾಗೂ ಸಂವಾದದಿಂದ ವಿಮರ್ಶಾತ್ಮಕ ವಿಶ್ಲೇಷಣೆ ಮತ್ತು ಸಮುದಾಯ ಸಂಪರ್ಕದ ಕಡೆಗೆ ಸಂಚಾಲಿತಗೊಳ್ಳುತ್ತಾರೆ. ಕಾರ್ಯಯೋಜನೆಯ ಮೊದಲ ಎರಡು ಮೂರು ವರ್ಷಗಳಲ್ಲಿ, ಆವರಣದ ಸುತ್ತಲಿನ ನೆರೆಹೊರೆಗಳಲ್ಲಿ ಓಡಾಡುವುದು, ಈ ನಿಟ್ಟಿನ ಕೆಲಸಗಳಲ್ಲಿ ತೊಡಗುವುದು ಮತ್ತು ಬಾಡಿಗೆಗೆ ಸಂಬಂಧಿಸಿದಂತೆ ಬಾಡಿಗೆದಾರರ ಅನುಭವಗಳ ಕುರಿತ ಸಂದರ್ಶನವನ್ನು ಸಮುದಾಯ ಸಂಪರ್ಕವು ಒಳಗೊಂಡಿತು. ಆಗಿನ

ಉದ್ದಿಶ್ಯವು ಬಾಡಿಗೆದಾರರ ಸಂಗತಿಗಳ ವ್ಯಾಪ್ತಿಯನ್ನು ನಿರ್ಧರಿಸುವುದು ಮತ್ತು ಕಾಳಜಿಯ ಪ್ರಮಾಣವನ್ನು ಅಳೆಯುವುದಾಗಿತ್ತು. ತೀರಾ ಇತ್ತೀಚೆಗೆ, ಇಂತಹ ಕೆಲಸಗಳಲ್ಲಿನ ತೊಡಗುವಿಕೆಯು, ಯುಕ್ತಿಪೂರ್ಣ ಹಾಗೂ ಪ್ರಾಯೋಗಿಕತೆಯ ಪ್ರಾಧಾನ್ಯದೊಂದಿಗೆ ಹೆಚ್ಚು ಸಕೇಂದ್ರಿತವಾದ ಸಂಘಟನೆಯನ್ನು ಒಳಗೊಂಡಿದೆ. ಆದಾಗ್ಯೂ, ಎರಡೂ ಸಂದರ್ಭಗಳಲ್ಲಿ, ವಿದ್ಯಾರ್ಥಿಗಳು ವಿಮರ್ಶಾತ್ಮಕ ವಿಶ್ಲೇಷಣೆಯಲ್ಲಿ ತೊಡಗಿದ್ದರು.

ಇತರ ಬಾಡಿಗೆದಾರರೊಂದಿಗೆ ವಿದ್ಯಾರ್ಥಿಗಳು ಮೊದಲ ಬಾರಿ ಸಂಪರ್ಕಕ್ಕೆ ಬಂದಾಗ, ಅವರಲ್ಲಿ, ತಮ್ಮನ್ನು ಕುರಿತ ವಿಮರ್ಶಾತ್ಮಕ ವಿಶ್ಲೇಷಣೆಯು ಹೆಚ್ಚಾಗಿ ಕಂಡುಬಂದಿದೆ. ಹಲವರಿಗೆ ಇದು ಅತಿ ಹೆಚ್ಚು ಆತಂಕದ ಕ್ಷಣವಾಗಬಹುದು. ತರಗತಿಗಳಲ್ಲಿ ವಿದ್ಯಾರ್ಥಿಗಳು ಪಾತ್ರ ನಿರ್ವಹಣೆಯ ಅಭ್ಯಾಸಗಳೊಂದಿಗೆ ಸನ್ನದ್ಧರಾಗಿ ಎರಡು ಅಥವಾ ಮೂರು ಜನರ ಗುಂಪುಗಳಲ್ಲಿ ಈ ನಿಟ್ಟಿನ ಕೆಲಸಗಳಲ್ಲಿ ತೊಡಗುತ್ತಾರಾದರೂ, ಅದು, ಸ್ವಯಂ-ಜಾಗೃತ ಸ್ತರವೊಂದನ್ನು ಸೃಜಿಸುವ ಒಂದು ಹೊಸ ಹಾಗೂ ಅಹಿತಕರ ಅನುಭವವಾಗಿರುತ್ತದೆ. ಇತರರೊಂದಿಗೆ ವ್ಯಕ್ತಿಯ ಐಹಿಕ ಸಂಬಂಧಗಳನ್ನು ಕುರಿತ ಸ್ವಯಂ ಚಿಂತನೆಯು ವೈಯಕ್ತಿಕ ಅಂತರ್ದೃಷ್ಟಿಗೆ ಆಧಾರವೆನಿಸುತ್ತದೆ. ಬಾಡಿಗೆದಾರರಲ್ಲಿ ಒಗ್ಗಟ್ಟನ್ನು ಬೆಳೆಸುವುದಕ್ಕೆ ಆವಶ್ಯಕವಾದ ಸ್ವಂತ ಪರಿವರ್ತನೆಯೊಂದರ ನಿಟ್ಟಿನಲ್ಲಿ, ವಿದ್ಯಾರ್ಥಿ ಸಂಘಟಕರು ತಮ್ಮ "ಬಾಡಿಗೆದಾರ ಗುರುತನ್ನು" "ವಿದ್ಯಾರ್ಥಿ ಗುರುತಿಗಿಂತ" ಭಿನ್ನವಾದದ್ದೆಂದು ಗುರುತಿಸಲು ಆರಂಭಿಸಿದಾಗ ಕೆಲವು ಅತ್ಯಂತ ಗಮನೀಯವಾದ ಸ್ವಂತ ಪರಿವರ್ತನೆಗಳು ಘಟಿಸುತ್ತವೆಂಬುದನ್ನು ನಾವು ಕಂಡುಕೊಂಡಿದ್ದೇವೆ. ಬಾಡಿಗೆಯ ಮನೆವಾಸದ ಅವೇ ಸಮಸ್ಯೆಗಳು ಹಾಗೂ ಹತಾಶೆಯನ್ನು ಅನುಭವಿಸುವ ಆದರೆ ವಿಶ್ವವಿದ್ಯಾನಿಲಯಕ್ಕೆ ಹಾಜರಾಗಿರುವವರ ಸಾಮಾಜಿಕ ಮೇಲ್ಮೆಯನ್ನು ಪಡೆಯದ ನೆರೆಹೊರೆಯವರೊಂದಿಗಿನ ಮುಖಾಮುಖಿ ಸಂಪರ್ಕದಿಂದ ನೇರವಾಗಿ ಈ ಬದಲಾವಣೆಯು ಪ್ರವಹಿಸುತ್ತದೆ. "ವಿದ್ಯಾರ್ಥಿ ಸಮಸ್ಯೆ"ಗಳನ್ನು ಕುರಿತ ಕಾಳಜಿಯಿಂದ "ಬಾಡಿಗೆದಾರರ ಸಮಸ್ಯೆ"ಗಳನ್ನು ಕುರಿತ ಹೆಚ್ಚು ವ್ಯಾಪಕವಾದ ಕಾಳಜಿಯ ಕಡೆಗೆ ಚರ್ಚೆಯು ಸಂಚಾಲಿತಗೊಂಡಾಗ, ವಿದ್ಯಾರ್ಥಿಗಳ ನಡುವಿನ ಸಂವಾದವು ಈ ಬದಲಾವಣೆಯನ್ನು ಪ್ರತಿಬಿಂಬಿಸುತ್ತದೆ. ತಮ್ಮ ಸಂಗತಿಗಳು ಪ್ರತ್ಯೇಕವಾದವುಗಳಲ್ಲ ಎಂಬುದನ್ನು ವಿದ್ಯಾರ್ಥಿಗಳು ಅರಿತಾಗ, ಆಗಾಗ ತಮ್ಮ ದೃಷ್ಟಿಕೋನದಲ್ಲಿ, ಒಗ್ಗಟ್ಟಿನ ವಿಸ್ತೃತ ಸಂವೇದನೆಗೆ ದಾರಿಯಾಗುವಂತಹ ಸಂವಾದಿ ಬದಲಾವಣೆಯನ್ನು ಅವರು ಅನುಭವಿಸುತ್ತಾರೆ. ಅಧ್ಯಯನ ಸರಣಿಯ ಬಗ್ಗೆ ಲಿಖಿತ ಮೌಲ್ಯಮಾಪನವೊಂದರಲ್ಲಿ ಒಬ್ಬ ಅನಾಮಧೇಯ ವಿದ್ಯಾರ್ಥಿಯು ವರದಿಯು ಹೀಗಿದೆ:

> ಬಾಡಿಗೆದಾರರ ಸಮಸ್ಯೆಗಳು ವಿದ್ಯಾರ್ಥಿಗಳಿಗೆ ಮಾತ್ರ ಸೀಮಿತವಲ್ಲ ಎಂಬುದನ್ನು ನಾನು ತಿಳಿದುಕೊಂಡೆ. ಬಾಡಿಗೆಗೆ ಸಂಬಂಧಪಟ್ಟ ಸಮಸ್ಯೆಗಳಿರುವ ಬಹಳಷ್ಟು ಬಾಡಿಗೆದಾರರಿಗೆ, ತಮ್ಮ ಹಕ್ಕುಗಳ ಬಗ್ಗೆ ಗೊತ್ತಿರುವುದಿಲ್ಲ. ಅವರು ವಿದ್ಯಾರ್ಥಿಗಳಾಗಿರಬಹುದು, ಕಡಿಮೆ ಆದಾಯದ ಬಾಡಿಗೆದಾರರಿರಬಹುದು, ಅಥವಾ ನಿಮ್ಮ ಸಮುದಾಯದ ಸಾಮಾನ್ಯ ಸದಸ್ಯನೇ ಇರಬಹುದು. ಸಂಘಟನೆಯ ಭಾಗವಾಗಿ, ಬಾಡಿಗೆದಾರರಿಗೆ ತಮ್ಮ ಹಕ್ಕುಗಳ ಬಗ್ಗೆ ತಿಳಿಸಿಕೊಡುವ ಅಥವಾ ಮಾಹಿತಿಯನ್ನೊದಗಿಸುವ ಅದರ ಉದ್ದಿಶ್ಯವು [ಇತಿ ಲಿಖಿತ] ಬಹಳ ಮಹತ್ವಪೂರ್ಣವಾದುದು. ಸಮುದಾಯ ಸಂಘಟನೆಯಲ್ಲಿನ ನನ್ನ ಅನುಭವದ ಮೂಲಕ, ವ್ಯಕ್ತಿಗಳು ಒಗ್ಗಟ್ಟಾದಲ್ಲಿ, ಅವರು ಬದಲಾವಣೆಯನ್ನು ಉಂಟುಮಾಡಬಹುದು ಎಂಬುದನ್ನು ಕಲಿತೆ.

ಸಾಮಾಜಿಕ ವಿಮರ್ಶೆಯು, ಬಾಡಿಗೆದಾರರು ಎದುರಿಸುವ ನಿರ್ದಿಷ್ಟ ಸಂಗತಿಗಳು ಹಾಗೂ ಸಮಸ್ಯೆಗಳ ಗುರುತಿಸುವಿಕೆಯೊಂದಿಗೆ (ಹಾಳಾದ ಉಪಕರಣಗಳು, ಅಗ್ನಿ ಅಪಾಯಗಳು, ಮುರಿದ ಕಿಟಕಿಗಳು, ಬಿಸಿಮಾಡುವ ವ್ಯವಸ್ಥೆಯ ಕೊರತೆ, ಕ್ರಿಮಿಕೀಟಗಳು, ಹುಳುಕು ನೆಲ , ನೀರಿನಿಂದಾದ ಹಾನಿ, ಸೋರುವ ಕೊಳವೆಗಳು, ಜವಾಬ್ದಾರಿ ಇಲ್ಲದ ವ್ಯವಸ್ಥಾಪಕರು ಹಾಗೂ ಮಾಲೀಕರು, ಹಿಂತಿರುಗಿಸದ ಠೇವಣಿಗಳು, ಬಾಡಿಗೆ ಹೆಚ್ಚಳ, ಖಾಸಗಿತನದ ಉಲ್ಲಂಘನೆ) ಆರಂಭವಾಗುತ್ತದೆಯಾದರೂ, ಅಧಿಕಾರದ ಇನ್ನಷ್ಟು ಮೂಲಭೂತ ಸಂಗತಿಗಳತ್ತ ಬಹಳ ಬೇಗೆ ಸಂಚಾಲಿತಗೊಳ್ಳುತ್ತದೆ. ವಿದ್ಯಾರ್ಥಿಗಳು ರಾಜ್ಯ ಮಟ್ಟದ ಹಾಗೂ ಸ್ಥಳೀಯ ಮನೆಬಾಡಿಗೆ ನಿಯಮಗಳ ಹಿನ್ನೆಲೆಯ ಸಂಶೋಧನೆಯನ್ನು ಕೈಗೊಳ್ಳುತ್ತಿದ್ದಂತೆಯೇ ನ್ಯಾಯಬದ್ಧ ಅನುಕೂಲಗಳು ಮಾಲೀಕರ ಪರವಾಗಿರುವುದನ್ನು ಮನಗಾಣುತ್ತಾರೆ. ಉದಾಹರಣೆಗೆ,

ಆರೋಗ್ಯಕ್ಕೆ ಅಪಾಯಕಾರಿಯಾದವುಗಳನ್ನು (ಉದಾ., ಹುಳುಕು ನೆಲ) ಉಲ್ಲಂಘನೆಗಳು ಎಂದು ವರ್ಗೀಕರಿಸಿರುವುದೇ ಇಲ್ಲ. ಉಲ್ಲಂಘನೆಗಳನ್ನು ಕುರಿತ ಕಾನೂನನ್ನು ಪಾಲಿಸುವಂತೆ ಮಾಡುವ ಒತ್ತಾಯವು, ಬಾಡಿಗೆದಾರನ ಮೇಲೆ ಅಸಂಗತವಾದ ಹೊರೆಯನ್ನು ಹೊರಿಸುತ್ತದೆ, ಮತ್ತು ನ್ಯಾಯಿಕ ದಂಡಗಳು, ಮಾಲೀಕನ ಉಲ್ಲಂಘನೆಗಳಿಗಿಂತಲೂ ಬಾಡಿಗೆದಾರನ ಉಲ್ಲಂಘನೆಗಳಿಗೆ ಸಂಬಂಧಿಸಿದಂತೆ ಹೆಚ್ಚು ತೀವ್ರವಾಗಿರುತ್ತವೆ ಎಂಬುದನ್ನು ಅವರು ಮನಗಾಣುತ್ತಾರೆ. ವಿಮರ್ಶಾತ್ಮಕ ಬೋಧನಶಾಸ್ತ್ರದ ಪರಿಭಾಷೆಯಲ್ಲಿ ಹೇಳುವುದಾದರೆ, ವಿದ್ಯಾರ್ಥಿಗಳು ವರ್ಗ ಆನುಕೂಲ್ಯದ ಪ್ರಕಾರವೊಂದನ್ನು ಗಮನಿಸುತ್ತಾರಲ್ಲದೆ, ವಿಮರ್ಶೆಯ ಭಾಷೆಯನ್ನು ಬಳಸಿ ಇದನ್ನು ವ್ಯಕ್ತಪಡಿಸಲು ಆರಂಭಿಸುತ್ತಾರೆ.

ಈ ಘಳಿಗೆಯಲ್ಲಿಯೇ ವಿದ್ಯಾರ್ಥಿಗಳು ವಿಮರ್ಶಾತ್ಮಕ ವಿಶ್ಲೇಷಣೆಯ ಹಂತವೊಂದಕ್ಕೆ ತಲುಪುತ್ತಾರೆ. ಒಮ್ಮೆ ಈ ರಾಚನಿಕ ಅನ್ಯಾಯವು ಕಾಣುವಂತೆ ಮಾಡಿದಲ್ಲಿ, ಸಮಸ್ಯಾ ಪರಿಹಾರ ಹಾಗೂ ಸಾಮಾಜಿಕ ಪರಿವರ್ತನೆಗಳು ಪ್ರಮುಖವೆನಿಸುತ್ತವೆ. ಮಾಲೀಕರಿಗೆ ನ್ಯಾಯಿಕ ಆನುಕೂಲ್ಯವು ಹೇಗೆ ಮತ್ತು ಏಕೆ ದೊರಕಿದೆ? ಬಾಡಿಗೆದಾರರು ಹೇಗೆ ಅಧಿಕಾರವನ್ನು ಪಡೆಯಬಹುದು? ಬಾಡಿಗೆದಾರರ ಶಕ್ತಿಯು ನೆಲೆಗೊಂಡಿರುವುದೆಲ್ಲಿ ಎಂಬ ಪ್ರಶ್ನೆಗಳ ಮೂಲಕ ಕೆಲಸ ಮಾಡುವುದು ಮತ್ತು ಸಾಮಾಜಿಕ ಪರಿವರ್ತನೆಯ ನಿಟ್ಟಿನ ಸಂಘಟನೆಯು ಸಮುದಾಯ ಸಂಘಟನೆಯ ಅನುಕ್ರಮದಲ್ಲಿನ ಎರಡನೆಯ ಸರಣಿಯ ಕೇಂದ್ರಬಿಂದುವಾಗಿರುತ್ತದೆ.

**ಅಧಿಕಾರದ ಪ್ರತಿರೋಧ ಮತ್ತು ಅಧಿನಾಯಕತ್ವದ ಬಹಿರಂಗಪಡಿಸುವಿಕೆ**

ಸಮುದಾಯ ಸಂಘಟನೆಯ ಅನುಕ್ರಮದಲ್ಲಿನ ಎರಡನೆಯ ಸರಣಿಗೆ ಸಮುದಾಯ ಕ್ರಿಯೆ (Community Action) ಎಂದು ಹೆಸರಿಡಲಾಗಿದೆ ಮತ್ತು ಅದು ವಿದ್ಯಾರ್ಥಿಗಳ ಕಾರ್ಯಾನ್ವಯನಕ್ಕೆ ಸಂಪೂರ್ಣವಾಗಿ ಮೀಸಲಾಗಿರುತ್ತದೆ. ಈ ಅವಧಿಯಲ್ಲಿ ವಿದ್ಯಾರ್ಥಿಗಳು ಬಾಡಿಗೆದಾರರ ಪ್ರಭಾವವನ್ನು ರೂಪಿಸುವ ಮತ್ತು ಆ ಹಾದಿಯಲ್ಲಿ ಇನ್ನೂ ಹೆಚ್ಚಿನ ನ್ಯಾಯಯುತ ಅಧಿಕಾರ ವಿತರಣೆಗೆ ಇರುವಂತಹ ತಡೆಗಳನ್ನು ಪ್ರತಿರೋಧಿಸುವ ಕಾರ್ಯನೀತಿಗಳನ್ನು ಸೃಜಿಸುತ್ತಾರೆ. ಈ ಅಧ್ಯಯನ ಸರಣಿಯಲ್ಲಿ ಸಾಂಪ್ರದಾಯಿಕ ವಿಶ್ವವಿದ್ಯಾನಿಲಯ ಶಿಕ್ಷಣದಲ್ಲಿ ಅಪರೂಪವಾಗಿ ಕಾಣಸಿಗುವಂತಹ ಅನುಭವಾಧಾರಿತ ಕಲಿಕೆಯ ಮಟ್ಟವೊಂದು ರೂಪುಗೊಳ್ಳುತ್ತದೆ. ಆದರೆ, ವಿದ್ಯಾರ್ಥಿಗಳ ಸಕ್ರಿಯತೆಯಿಂದಾಗಿ ಉಂಟಾಗುವ ಸಕಾರಾತ್ಮಕ ಸಾಮಾಜಿಕ ಪರಿವರ್ತನೆಯೂ ಅಷ್ಟೇ ಮುಖ್ಯವಾದುದು. ಕಳೆದ ಹಲವು ವರ್ಷಗಳಲ್ಲಿ ಬಾಡಿಗೆದಾರರ ಸಂಘವು "ಯಶಸ್ಸನ್ನು ಕಂಡ" ಸಾಧನೆಗಳ ಒಂದು ಭಾಗಶಃ ಪಟ್ಟಿಯು ಹೀಗಿದೆ: 1) ಬಾಡಿಗೆದಾರರ ವಾಸದಲ್ಲಿ ಸುರಕ್ಷಿತ ಹಾಗೂ ಆರೋಗ್ಯಕರ ಕಟ್ಟಡಗಳಿಗೆ ದಾರಿಮಾಡಿಕೊಟ್ಟ ರಾಚನಿಕ ಸುಧಾರಣೆಗಳು; 2) ಹುಳುಕು ನೆಲವನ್ನು ಆರೋಗ್ಯಕ್ಕೆ ಅಪಾಯಕಾರಿಯೆಂದು ಪರಿಗಣಿಸುವುದೂ ಸೇರಿದಂತೆ, ನಗರ ವಾಸಗೃಹ ಸಂಹಿತೆಯ ವಿಸ್ತರಣೆ; 3) ಭೂಮಾಲೀಕರ ಉಲ್ಲಂಘನೆಗಳನ್ನು ವರದಿಮಾಡಲು ಒಂದು ಅಧಿಕೃತ ಕ್ರಮದ ಸ್ವೀಕಾರ; 4) ಎಲ್ಲಾ ಹೊಸ ಬಾಡಿಗೆದಾರರಿಗೆ ಬಾಡಿಗೆದಾರರ ಹಕ್ಕುಗಳ ಕುರಿತ ಕರಪತ್ರವನ್ನು ವಿತರಿಸುವ ನೀತಿಯ ಸ್ವೀಕಾರ; 5) ವಾಸಗೃಹ ಸಂಹಿತೆಯ ಉಲ್ಲಂಘನೆಗಳ ಪ್ರವರ್ತನದ (enforcement) ಅನಿರೀಕ್ಷಿತ ಹೆಚ್ಚಳ; ಮತ್ತು 6) ನಗರ ಸಮಿತಿಯಿಂದ ಒಂದು ಹೆಚ್ಚುವರಿ ಸಂಹಿತೆಯನ್ನು ಜಾರಿಗೊಳಿಸುವ ಅವಕಾಶದ ಪರಿಗಣನೆ.

ವರ್ಗ ಸಂಘರ್ಷದ ದೃಷ್ಟಿಯಿಂದ ಮೇಲೆ ಪಟ್ಟಿ ಮಾಡಿದ ಪ್ರಗತಿಗಳು ಸಾಪೇಕ್ಷವಾಗಿ ಗೌಣವೆನಿಸಿದಾಗ್ಯೂ, ವಿದ್ಯಾರ್ಥಿ-ಸಂಘಟಿತ ಬಾಡಿಗೆದಾರರ ಸಂಘವು ಓರೆಗಾನ್‌ನ ಮಾನ್‌ಮತ್ (Monmouth) ಎಂಬ ಸಣ್ಣ ಕಾಲೇಜು ಪೇಟೆಯಲ್ಲಿ ಪ್ರಭಾವ ಹಾಗೂ ಅಧಿಕಾರದ ಗಣನೀಯ ಶ್ರೇಣಿಯೊಂದನ್ನು ಸಾಧಿಸಿದೆ. ಹೀಗೆ ಇದು ಸಮುದಾಯ ಸಂಘಟನೆ ಹಾಗೂ ಸಾಮಾಜಿಕ ಪರಿವರ್ತನೆಯ ಸಾಧ್ಯತೆಗಳನ್ನು ಅನ್ವೇಷಿಸುವ ವಿದ್ಯಾರ್ಥಿಗಳಿಗೆ ಪ್ರೇರಣೆ ಹಾಗೂ ಹೆಮ್ಮೆಯ ಸ್ರೋತವೆನಿಸಿದೆ (source). ಇಂತಹ ಸಭ್ಯ ಗುರಿಗಳನ್ನು ಸಾಧಿಸುವ ಮಾರ್ಗವನ್ನು ಸಂಘಟನಾತ್ಮಕವಾಗಿ ಪ್ರಜಾಸತ್ತಾತ್ಮಕ ಹಾಗೂ ರಾಜಕೀಯವಾಗಿ ಯುಕ್ತಿಪೂರ್ಣವಾದದ್ದು ಎಂದು ವ್ಯಾಖ್ಯಾನಿಸಬಹುದು. ಎರಡನೆಯ ಅವಧಿಯ ಆರಂಭದಿಂದಲೇ, ನಿಯತವಾಗಿ ನಿಶ್ಚಿತವಾದ

ತರಗತಿಯ ಸಮಯವನ್ನು ಕ್ರಮಬದ್ಧವಾದ ಕಾರ್ಯಸೂಚಿ ಹಾಗೂ ಸರ್ವಸಮ್ಮತಿ ಆಧಾರಿತ ಯೋಜನಾ ಮಾದರಿಯೊಂದಿಗೆ, ಪರಿಪೂರ್ಣಗೊಂಡ, ಬಾಡಿಗೆದಾರರ ಸಂಘದ ವಾರಕ್ಕೆ ಎರಡು ಬಾರಿಯ, ಸಭೆಯಾಗಿ ಪರಿವರ್ತಿಸಲಾಗಿದೆ. ಪ್ರಾಧ್ಯಾಪಕರು ತರಗತಿಯ ಮುಂದಾಳುವಾಗಿ ಉಳಿಯದೆ ಓರ್ವ ಪದನಿಮಿತ್ತ ಸೌಕರ್ಯಕಾರಕರಾಗಿ ಹಾಗೂ ಸಲಹೆಗಾರರಾಗಿ ಕೆಲಸ ಮಾಡುತ್ತಾರೆ. ಈ ರಾಚನಿಕ ಪರಿವರ್ತನೆಯು ಶಿಕ್ಷಣದ ವಾಣಿಜ್ಯೀಕರಣದ ಪರಿಕಲ್ಪನೆಗೆ ಹೊರತಾದ, ವಿದ್ಯಾರ್ಥಿ ಹಾಗೂ ಅಧ್ಯಾಪಕರು ಸಮೀಕ್ಷಾತ್ಮಕ ಸಹ-ಸಂಶೋಧಕರಾಗಿ ಸಹಕರಿಸುವಂತಹ ಪಾಲುದಾರಿಕೆಯ ಕಡೆಗೆ ಮುಂದುವರೆಯುವ ಒಂದು ಉದ್ದೇಶಪೂರ್ವಕ ಪ್ರಯತ್ನವಾಗಿದೆ.

ಈ ಸಹಭಾಗಿತ್ವದಿಂದಾಗಿ ಹೊರಹೊಮ್ಮುವ ಆಯೋಜನಾ ಕಾರ್ಯನೀತಿಗಳ ಹಾಗೂ ರಾಜಕೀಯ ಹಸ್ತಕ್ಷೇಪಗಳ ಸಂಘಟನೆಯು, ಪಾದಚಾರಿ ಹಾಗೂ ಅನುಕೂಲವಂತನಿಂದ ಮೊದಲುಗೊಂಡು, ಅಪಾಯಕಾರಿ ಹಾಗೂ ಅಶಾಂತಿಕಾರಕನವರೆಗೆ ವಿಭಿನ್ನವಾಗಿರುತ್ತದೆ. ವಿದ್ಯಾರ್ಥಿಗಳು ಮಾಹಿತಿದಾಯಕ ಚಿಕ್ಕ ಕರಪತ್ರಗಳನ್ನು ಬಾಡಿಗೆದಾರರಿಗೆ ವಿತರಿಸಿದ್ದಾರೆ, ಸದಸ್ಯರೊಂದಿಗೆ ನಗರ ಸಮಿತಿಯ ಸಭೆಗಳನ್ನು ವ್ಯವಸ್ಥೆಗೊಳಿಸಿದ್ದಾರೆ, ನಿರ್ದಿಷ್ಟ ಕಟ್ಟಡಗಳಲ್ಲಿನ ಬಾಡಿಗೆದಾರರನ್ನು ಸಂಘಟಿಸಿದ್ದಾರೆ, ಮಾಧ್ಯಮಗಳಲ್ಲಿನ ಕಥನಗಳ ಮೂಲಕ ಭೂಮಾಲೀಕರು ಹಾಗೂ ನಗರದ ಅಧಿಕಾರಿವರ್ಗದವರಿಗೆ ಸವಾಲೆಸೆದಿದ್ದಾರೆ, ಪತ್ರ-ಲೇಖನ ಅಭಿಯಾನಗಳನ್ನು ಆಯೋಜಿಸಿದ್ದಾರೆ, ನಗರ ಸಮಿತಿಯ ಜೊತೆಗೆ ನೀತಿಯನ್ನು ಕುರಿತ ಬದಲಾವಣೆಗಳನ್ನು ವ್ಯವಹರಿಸಿದ್ದಾರೆ, ಸಾಮೂಹಿಕ ಸದಸ್ಯತ್ವ ಸಭೆಗಳಲ್ಲಿ ನಗರ ಸಮಿತಿಯ ಸದಸ್ಯರಿಗೆ ಸವಾಲೆಸೆದಿದ್ದಾರೆ, ಮತ್ತು ಹಟಮಾರಿ ಭೂಮಾಲೀಕರನ್ನು ವಿರೋಧಿಸಿದ್ದಾರೆ. ಈ ಪ್ರತಿಯೊಂದು ಸಂದರ್ಭಗಳಲ್ಲಿಯೂ ಕ್ರಿಯೆಯನ್ನು ಕುರಿತ ನಿರ್ಣಯವು ಒಂದು ವಿಚಾರಾತ್ಮಕ ಒಮ್ಮತವಾಗಿತ್ತು. ನಿಶ್ಚಿತವಾಗಿ, ಈ ಕ್ರಿಯೆಗಳು ಯಾವಾಗಲೂ ಉದ್ದೇಶಿತ ಪರಿಣಾಮಗಳನ್ನೇನೂ ಹೊಂದಿರಲಿಲ್ಲ, ಮತ್ತು ಭೂಮಾಲೀಕರು, ನಗರ ಸಮಿತಿ ಸದಸ್ಯರು ಹಾಗೂ ನಗರದ ಅಧಿಕಾರದವರು ಅನೇಕ ಯುಕ್ತಿಗಳು ಹಾಗೂ ಕಾರ್ಯತಂತ್ರಗಳನ್ನು ಪ್ರತಿರೋಧ, ತಿರಸ್ಕಾರ, ಹಾಗೂ ಪ್ರತಿಭಟನೆಗಳೊಂದಿಗೆ ಎದುರುಗೊಂಡಿದ್ದಾರೆ. ಆದರೂ ಅಧಿಕಾರದ ಪ್ರತಿರೋಧವು ಬಹಳಷ್ಟು ವಿದ್ಯಾರ್ಥಿಗಳಿಗೆ ಮೊದಲಿಗೆ ಅಗೋಚರವಾಗಿದ್ದ ನಿಯಂತ್ರಣದ ಆಯಾಮಗಳನ್ನು ಬಹಿರಂಗಪಡಿಸುತ್ತದಾದ್ದರಿಂದ ಅದು ಶಿಕ್ಷಾಪ್ರದವೆನಿಸಿದೆ (instructive).

ಸಾಂಸ್ಕೃತಿಕ ಚಿಂತನೆಗಳು ಹಾಗೂ "ಸಾಮಾನ್ಯ ಪ್ರಜ್ಞೆ"ಯು ಅಧಿಕಾರದಲ್ಲಿರುವವರ ಆಸಕ್ತಿಯನ್ನು ಪೋಷಿಸುವ ಪ್ರಕ್ರಿಯೆಯನ್ನು ಗುರುತಿಸುವುದು ಸಾಂಪ್ರದಾಯಿಕ ಉಪನ್ಯಾಸದ ಅಧ್ಯಯನ ಸರಣಿಯಲ್ಲಿ ವಿದ್ಯಾರ್ಥಿಗಳಿಗೆ ಸಾಮಾನ್ಯವಾಗಿ ಕಷ್ಟಕರ ಸಂಘರ್ಷವೇ ಆಗಿರುತ್ತದೆ. ಆದರೆ ಬಾಡಿಗೆದಾರರ ಸಾಮೂಹಿಕ ಆಸಕ್ತಿಗಳ ಮುನ್ನಡೆಗೆ ಪ್ರಯತ್ನಿಸುವ ಅನುಭವವು ಸಾಂಸ್ಕೃತಿಕ ಅಧಿನಾಯಕತ್ವ ಹಾಗೂ ಆರ್ಥಿಕ ಅಧಿಕಾರಗಳ ನೈಜ ಉದಾಹರಣೆಗಳನ್ನು ಬೆಳಕಿಗೆ ತರುತ್ತದೆ. ಉದಾಹರಣೆಗೆ, ತಾವು "ರಾಜಕೀಯದವರು" ಹಾಗೂ "ಪಕ್ಷಪಾತಿ"ಗಳೆಂಬಂತೆ ಗುರುತಿಸಲ್ಪಡುತ್ತೇವೆ ಎಂಬುದಾಗಿ ಕೆಲವು ವಿದ್ಯಾರ್ಥಿಗಳಲ್ಲಿ ಮನೆಮಾಡಿರುವ ಭಯ ಹಾಗೂ ಆತಂಕವು, ಅಧ್ಯಯನ ಸರಣಿಯಲ್ಲಿ ಬಹುಬೇಗನೆ ಎದುರಾಗುವ ಸಂಗತಿಯಾಗಿದೆ. ನಾವು ಸಾರ್ವಜನಿಕ ಸಂಪನ್ಮೂಲಗಳನ್ನು "ಆಸಕ್ತ ಗುಂಪಿನ ಕಾರ್ಯಸೂಚಿಯೊಂದನ್ನು" ಮುನ್ನಡೆಸಲು ಬಳಸುತ್ತೇವೆ ಎಂಬ ಆಪಾದನೆಯು, ಬಹಳಷ್ಟು ವಿದ್ಯಾರ್ಥಿಗಳಿಗೆ ಈ ಅಧ್ಯಯನ ಸರಣಿಯನ್ನು ಕುರಿತ ಯಥೋಚಿತ ವಿಮರ್ಶೆಯೆನಿಸಿದೆಯೆಂಬುದು,. ಇಂತಹುದೇ ಒಂದು ಕಾಳಜಿಯಾಗಿದೆ. ಆದಾಗ್ಯೂ, ಇದೇ ವಾದವನ್ನು ವಿಶ್ವವಿದ್ಯಾನಿಲಯವು ನೀಡುವ ಹೆಚ್ಚು ಸಾಂಪ್ರದಾಯಿಕವಾದ ಅಧ್ಯಯನ ಸರಣಿಗಳಿಗೆ ವಿಸ್ತಾರಿತಗೊಳಿಸಬಹುದೆ? ಎಂದು ನಾವು ವಿದ್ಯಾರ್ಥಿಗಳನ್ನು ಕೇಳಿದಾಗ, ಒಂದು ಅಪ್ರತ್ಯಕ್ಷ ಪಠ್ಯಕ್ರಮವನ್ನು ಬಹಿರಂಗಪಡಿಸಿದಂತಾಗುತ್ತದೆ. ಉದಾಹರಣೆಗೆ, ಪ್ರಧಾನ ನವಸಾಂಪ್ರದಾಯಿಕ ಸೈದ್ಧಾಂತಿಕ ಎಣಿಕೆಗಳೊಂದಿಗಿನ ಅರ್ಥಶಾಸ್ತ್ರದ ಪಠ್ಯಕ್ರಮವು ರಾಜಕೀಯವಾಗಿ ಪಕ್ಷಪಾತಿಯಾಗಿದೆಯೆಂಬ ಸವಾಲನ್ನು ಏಕೆ ಒಡ್ಡುವುದಿಲ್ಲ? ವರ್ತಮಾನ ಪರಿಸ್ಥಿತಿಯು ರಾಜಕೀಯವಾಗಿ ತಟಸ್ಥವಾಗಿಲ್ಲ ಮತ್ತು ವ್ಯವಹಾರ ಆಡಳಿತ, ಗಣಕ ವಿಜ್ಞಾನ, ಹಾಗೂ ಕಾನೂನು ಜಾರಿಯನ್ನು ಕುರಿತ ಪ್ರಶಿಕ್ಷಣಗಳೂ (internship) ಸಹ ಸಾರ್ವಜನಿಕ ಸಂಪನ್ಮೂಲಗಳನ್ನು ಬಂಡವಾಳಶಾಹಿ ವರ್ಗವೊಂದರ ರಾಜಕೀಯ ಹಿತಾಸಕ್ತಿಗಳ ಸೇವೆಗಾಗಿ ಬಳಸುತ್ತವೆ ಎಂಬುದನ್ನು ವಿದ್ಯಾರ್ಥಿಗಳು ಕಾಣಲಾರಂಭಿಸುತ್ತಾರೆ.

ಹೀಗೆ, ಸಮುದಾಯ ಸಂಘಟನೆಯನ್ನು ಕುರಿತ ಅಧ್ಯಯನ ಸರಣಿಯೊಂದರಲ್ಲಿನ "ಸಕ್ರಿಯ ರಾಜಕಾರಣವು" ಸಾಂಪ್ರದಾಯಿಕ ವಿಶ್ವವಿದ್ಯಾನಿಲಯವೊಂದರ ಶಿಕ್ಷಣವು ವರ್ಗದ ಪುನರ್‌ಸೃಜನೆಗೆ ಹೇಗೆ ಕೊಡುಗೆ ನೀಡುತ್ತದೆ ಎಂಬುದನ್ನು ಬಹಿರಂಗಪಡಿಸಲು ಸಹಾಯಮಾಡುತ್ತದೆ.

ವಾಸ್ತವವಾಗಿ, ಸಾಂಪ್ರದಾಯಿಕ ಪ್ರಶಿಕ್ಷಣಗಳು ಹಾಗೂ ಸಮುದಾಯದ ಬಾಡಿಗೆದಾರರ ಸಂಘದ ಸಂಘಟನೆಯ ಪ್ರಯತ್ನಗಳ ನಡುವಿನ ಮುಖ್ಯ ಅಂತರವೇನೆಂದರೆ ಮೊದಲನೆಯದು ಅಧಿಕಾರದಲ್ಲಿರುವವರಿಂದ ವಿರೋಧವನ್ನು ಸೃಜಿಸುವುದಿಲ್ಲ - ಈ ಮಾತನ್ನು ಸಮುದಾಯ ಕ್ರಿಯೆಯ ನಿಟ್ಟಿನಲ್ಲಿ ನಿರ್ವಹಿಸಲ್ಪಟ್ಟ ಕೆಲಸದ ಬಗ್ಗೆ ಹೇಳುವಂತಿಲ್ಲ. ವಾಸ್ತವವಾಗಿ, ಕಳೆದ ಹಲವಾರು ವರ್ಷಗಳಿಂದಲೂ ವಿದ್ಯಾರ್ಥಿ ಸಂಘಟನೆಯ ಪ್ರಯತ್ನಗಳಿಗೆ ಬಾಡಿಗೆದಾರರ ಅಧಿಕಾರವನ್ನು ಮೊಟಕುಗೊಳಿಸುವ ಉದ್ದಿಶ್ಯದ ಕ್ರಮಗಳ ಸರಣಿಗಳೇ ಎದುರಾಗಿವೆ. ಉದಾಹರಣೆಗೆ, ಬಾಡಿಗೆದಾರರಿಗೆ, ಅವರ ನ್ಯಾಯಯುತ ಹಕ್ಕುಗಳ ಬಗ್ಗೆ ಅರಿವನ್ನು ಮೂಡಿಸಿ, ಅದನ್ನು ಕಲಿಸುವ ಒಂದು ಪ್ರಯತ್ನವಾಗಿ ವಿಶ್ವವಿದ್ಯಾನಿಲಯದ ವಾರ್ತಾಪತ್ರಿಕೆಯಲ್ಲಿ ಒಂದು ಮಾಹಿತಿ ಕಲಮನ್ನು ವಿದ್ಯಾರ್ಥಿಗಳು ಪ್ರಾರಂಭಿಸಿದಾಗ ಈ ಪರಿಸ್ಥಿತಿಯನ್ನು ಕಾಣಬಹುದಿತ್ತು. ಆ ಸಾಪ್ತಾಹಿಕ ವಿಭಾಗವು "ತಿಂಗಳ ಕಸ" (dump of the month) ಎಂಬ ಶೀರ್ಷಿಕೆ ಹೊಂದಿದ್ದು, ಅದು ನಿರ್ದಿಷ್ಟ ಸಮಸ್ಯೆಗಳಿಂದ ಕೂಡಿದ ಬಾಡಿಗೆವಾಸದ ಘಟಕಗಳ ಛಾಯಾಚಿತ್ರಗಳನ್ನು ಹತಾಶ ಬಾಡಿಗೆದಾರರ ಹೇಳಿಕೆಗಳೊಂದಿಗೆ ಪ್ರದರ್ಶಿಸಿತ್ತು. ಆ ಕಲಮು ಹಲವಾರು ತಿಂಗಳುಗಳವರೆಗೆ ಚಾಲ್ತಿಯಲ್ಲಿದ್ದು, ವಿದ್ಯಾರ್ಥಿಗಳ ಕಡೆಯಿಂದ ಉತ್ಸಾಹಭರಿತ ಹಿಮ್ಮಾತುಗಳನ್ನು (feedback) ಹುಟ್ಟುಹಾಕಿತು. ಅಂತೆಯೇ ಅದು, ಪ್ರಮುಖವಾಗಿ ತೋರಿಸಲ್ಪಟ್ಟ ವಾಸಘಟಕಗಳ ಭೂಮಾಲೀಕರ ಕಡೆಯಿಂದ ಕೋಪ ಹಾಗೂ ಪ್ರತಿಭಟನೆಗಳ ಕಿಡಿಯನ್ನೂ ಎಬ್ಬಿಸಿತು. ಒಂದು ಸ್ಥಳೀಯ ಬಾಡಿಗೆ ಏಜೆನ್ಸಿಯು ಆ ಪತ್ರಿಕೆಯಿಂದ ತನ್ನ ಜಾಹೀರಾತನ್ನು ಹಿಂತೆಗೆದುಕೊಳ್ಳುವುದಾಗಿ ಬೆದರಿಕೆ ಹಾಕಿದಾಗ, ಸಂಪಾದಕ ಸಿಬ್ಬಂದಿಯವರು ("ವಿಶ್ವವಿದ್ಯಾನಿಲಯದ ಸಲಹೆಗಾರರ" ಪ್ರಾಬಲ್ಯಕ್ಕೊಳಪಟ್ಟಿದ್ದ) ಆ ಕಲಮನ್ನು ಒಂದು "ಜಾಹೀರಾತಾಗಿ" ಮಾತ್ರ ಮುಂದುವರಿಸಬಹುದೆಂದು ಬಾಡಿಗೆದಾರರ ಸಂಘಕ್ಕೆ ತಿಳಿಸಿದರಲ್ಲದೆ, ವಿದ್ಯಾರ್ಥಿಗಳು ಜಾಹೀರಾತು ಶುಲ್ಕವನ್ನು ಪಾವತಿಸಬೇಕೆಂದರು, ನೀತಿಯ ಈ ಬದಲಾವಣೆಯು ಅಂತಿಮವಾಗಿ ಆ ಕಲಮನ್ನು ಮುಗಿಸಿಬಿಟ್ಟಿತು!

ಬಾಡಿಗೆದಾರರ ಸಂಘವು ದೂರುಗಳು ಹಾಗೂ ಆರೋಗ್ಯ ಮತ್ತು ಸುರಕ್ಷೆಯನ್ನು ಕುರಿತ ಗಂಭೀರ ಉಲ್ಲಂಘನೆಗಳ ಇತಿಹಾಸವಿದ್ದ ಒಂದು ಕುಖ್ಯಾತ ವಸತಿ ಸಮುಚ್ಚಯದ ಬಗ್ಗೆ ತನ್ನ ಸಂಘಟನಾ ಪ್ರಯತ್ನಗಳನ್ನು ಕೇಂದ್ರೀಕರಿಸಿದಾಗ ಪ್ರಬಲ ಭೂಮಾಲೀಕರ ಕಡೆಯಿಂದ ತೀವ್ರ ಪ್ರತಿಭಟನೆಯ ಒಂದು ದೃಷ್ಟಾಂತವು ಘಟಿಸಿತು. ವಿದ್ಯಾರ್ಥಿ ಸಂಘಟಕರು ಮಾಹಿತಿಯ ಕರಪತ್ರಗಳನ್ನು ಮನೆಮನೆಗೆ ವಿತರಿಸಿದರಲ್ಲದೆ, ಬಾಡಿಗೆದಾರರೊಂದಿಗೆ ಮನೆಗಳಲ್ಲಿ ಭೇಟಿಗಳನ್ನು ಸಂಘಟಿಸಿದರು. ನಗರದ ಅಧಿಕಾರಿ ವರ್ಗದವರಿಗೆ ಸೂಚನೆಗಳನ್ನು ನೀಡಿ, ಅಸುರಕ್ಷಿತ ವಾಸದ ಪರಿಸ್ಥಿತಿಗಳನ್ನು ವಿವರಿಸಲು, ಒಂದು ಸ್ಥಳೀಯ ಕೇಬಲ್-ಸಂಪರ್ಕದ ದೂರದರ್ಶನ ಕಾರ್ಯಕ್ರಮದಲ್ಲಿ ಕಾಣಿಸಿಕೊಂಡರು. ಮೊದಲಿಗೆ, ಸಂಘಟಕರು ಸ್ವತ್ತಿನ ಕಡೆಗೆ ಬಾರದಂತೆ ತಡೆಯುವ ವಸತಿ ಸಮುಚ್ಚಯದ ವ್ಯವಸ್ಥಾಪಕನ ಪ್ರಯತ್ನವು ವಿಫಲವಾಯಿತು. ಅನಂತರ, ಆ ವ್ಯವಸ್ಥಾಪಕನು ಮಾಲೀಕನನ್ನು, ಆರೋಗ್ಯ ಹಾಗೂ ಸುರಕ್ಷತಾ ಉಲ್ಲಂಘನೆಗಳ "ಜವಾಬ್ದಾರಿಯಿಂದ ಮುಕ್ತಗೊಳಿಸುವ" ಕರಾರಿಗೆ ಸಹಿ ಹಾಕಲು ಬಾಡಿಗೆದಾರರಿಗೆ ಒತ್ತಡ ತಂದನು. ಇದಕ್ಕೂ ಪ್ರತಿಭಟನೆ ವ್ಯಕ್ತವಾದಾಗ ವಸತಿ ಸಮುಚ್ಚಯದ ಯಜಮಾನನು ಕಾನೂನು ಕ್ರಮವನ್ನು ಕೈಗೊಂಡನು ಮತ್ತು ಬಾಡಿಗೆದಾರರ ಸಂಘದ ಅಧ್ಯಾಪಕ ಸಲಹೆಗಾರರಿಗೆ, ವಿಶ್ವವಿದ್ಯಾನಿಲಯದ ಆಡಳಿತಕ್ಕೆ, ಹಾಗೂ ಸಹಾನುಭೂತಿಯುಳ್ಳ ನಗರದ ಅಧಿಕಾರಿವರ್ಗದವರಿಗೆ ಮಾಲೀಕರ ಗೌರವಕ್ಕೆ ಚ್ಯುತಿಯನ್ನುಂಟುಮಾಡಲಾಗಿದೆ ಎಂದು ನಿಶ್ಚಯಪೂರ್ವಕವಾಗಿ ಹೇಳುವ "ಅಪಚಾರದ ನೋಟೀಸನ್ನು" ಕಳಿಸಿಕೊಟ್ಟನು. ಈ ಎಲ್ಲಾ ಕ್ರಮಗಳೂ ನಿಷ್ಫಲವೆಂದು ಸಾಬೀತಾದರೂ, ಈ ಬೆದರಿಕೆಗಳು, ಅಧಿಕಾರ ಹಾಗೂ ಲಾಭಗಳನ್ನು ಅಷ್ಟು ಸುಲಭವಾಗಿ ಬಿಟ್ಟುಕೊಡಲಾಗುವುದಿಲ್ಲ ಎಂಬುದನ್ನು ವಿದ್ಯಾರ್ಥಿಗಳಿಗೆ ಸ್ಪಷ್ಟವಾಗಿ ತಿಳಿಯಪಡಿಸಿದುವು.

ಅಧಿಕಾರವುಳ್ಳವರ ಕಡೆಯಿಂದ ಪ್ರತಿರೋಧವನ್ನು ಅನುಭವಿಸಿದ ನಂತರ, ಸಮಸ್ಯೆಗಳು ಹಾಗೂ ದೂರುಗಳನ್ನು ವೈಯಕ್ತಿಕಗೊಳಿಸಬಹುದು, ವ್ಯಕ್ತಿಗತಗೊಳಿಸಬಹುದು ಮತ್ತು ಪುನರ್ನಿರ್ದೇಶಿತಗೊಳಿಸಬಹುದು ಎಂಬ ಕಾರಣಕ್ಕಾಗಿ

ಭೂಮಾಲೀಕರು ಏಕಾಂಗಿಯಾದ ಬಾಡಿಗೆದಾರರಿಗೆ ಆದ್ಯತೆ ನೀಡುತ್ತಾರೆ ಎಂಬುದನ್ನು ವಿದ್ಯಾರ್ಥಿಗಳು ಕಂಡುಕೊಳ್ಳುತ್ತಾರೆ. ವಿರೋಧ ಹಾಗೂ ಅಸಂಗತಿಗಳಿಂದ ಬದಲಾವಣೆಯು ಉಂಟಾಗುತ್ತದೆ ಮತ್ತು ಅಧಿಕಾರವು ಹೋರಾಟವಿಲ್ಲದೆ ದೊರಕುವುದಿಲ್ಲ ಎಂಬುದನ್ನು ಸಹ ಅವರು ತಿಳಿಯುತ್ತಾರೆ. ಅಷ್ಟೇ ಅಲ್ಲದೆ, ವಸ್ತುತಃ, ವಿದ್ಯಾರ್ಥಿಗಳ ಪ್ರಯತ್ನಗಳಿಗೆ ಪ್ರತಿರೋಧವಿದ್ದಾಗಲೇ ಅದು ಬಾಡಿಗೆದಾರರ ಒಗ್ಗಟ್ಟನ್ನು ರೂಪಿಸಲು, ವಿದ್ಯಾರ್ಥಿಗಳ ಉತ್ಸಾಹವನ್ನು ವರ್ಧಿಸಲು ಹಾಗೂ ಉದ್ದಿಶ್ಯಕ್ಕೆ ಬದ್ಧತೆಯ ಪ್ರೇರಣೆಯನ್ನು ನೀಡಲು ಸಾಧ್ಯವಾಗುತ್ತದೆ, ವಾಸ್ತವವಾಗಿ, ವಿದ್ಯಾರ್ಥಿಗಳು ಅಧ್ಯಯನ ಸರಣಿಯ ರಚನೆಯನ್ನು ವಿಶಿಷ್ಟವಾಗಿ ಸಕಾರಾತ್ಮಕವಾಗಿದೆಯೆಂಬ ನಿಟ್ಟಿನಲ್ಲಿ ಗ್ರಹಿಸುತ್ತಾರೆಂಬುದನ್ನು ಅಧ್ಯಯನ ಸರಣಿಯ ಅನಾಮಧೇಯ ಮೌಲ್ಯಮಾಪನಗಳಲ್ಲಿ ನಾವು ಕಂಡಿದ್ದೇವೆ. ವಿದ್ಯಾರ್ಥಿಯೊಬ್ಬನು ಅಧ್ಯಯನ ಸರಣಿಯ ಅವಧಿಯ ಅಂತ್ಯದಲ್ಲಿ ಬರೆದ ಪಠ್ಯಕ್ರಮದ ಮೌಲ್ಯಮಾಪನದ ಈ ಕೆಳಗಿನ ಪ್ರಾತಿನಿಧಿಕ ಉಲ್ಲೇಖವು ಈ ಅಂಶವನ್ನು ವ್ಯಕ್ತಪಡಿಸುತ್ತದೆ:

> ತರಗತಿಯ ಹೊರಗಿನ ಜನರೊಂದಿಗಿನ ಪಾರಸ್ಪರಿಕ ಕ್ರಿಯೆಯ ನಿಟ್ಟಿನ ಕಲಿಕೆಯು ಹೆಚ್ಚು ಪರಿಪೂರ್ಣವಾಗಿದ್ದು, ಅತ್ಯಂತ ಫಲದಾಯಕವೆಂಬುದಾಗಿ ಭಾಸವಾಗುತ್ತದೆ. ನನ್ನ ಪ್ರಾಧ್ಯಾಪಕರು ನಮ್ಮಲ್ಲಿ ನಂಬಿಕೆಯಿಟ್ಟು ನಾವು ಕಲಿತದ್ದನ್ನು ನಮ್ಮ ಸುಪರ್ದಿಗೆ ತೆಗೆದುಕೊಳ್ಳುವ ಅಧಿಕಾರವನ್ನಿತ್ತರು. ತಕ್ಷಣವೇ ಅದನ್ನು ಬಳಕೆಗೆ ತರುವುದು ಅತ್ಯಂತ ಸವಾಲಿನದಾಗಿತ್ತಲ್ಲದೆ, ಭಯಪಡಿಸುವಂತಿತ್ತು [ಆದರೆ] ನಾನು ವಿಷಯವೊಂದರ ಸಮರ್ಥಕನಾದುದರಿಂದ, ಅದರಲ್ಲಿನ ನಂಬಿಕೆಯು ನನಗೆ ಆತ್ಮವಿಶ್ವಾಸವನ್ನು ನೀಡಿತು.

**ಪ್ರತಿ-ಅಧಿನಾಯಕತ್ವ ಮತ್ತು ಪ್ರತಿ-ಸಂಸ್ಕೃತಿ**

ಬಂಡವಾಳಶಾಹಿ ಮೇಲ್ವರ್ಗದವರ ಪ್ರಬಲ ಸೈದ್ಧಾಂತಿಕ ಮೌಲ್ಯಗಳಿಗೆ ವಿರುದ್ಧವಾಗಿ ನಿಲ್ಲುವಂತಹ ಪ್ರತಿ-ಅಧಿನಾಯಕತ್ವ ಮತ್ತು ಪ್ರತಿ-ಸಂಸ್ಕೃತಿಯ ವಿಕಸನವು ವಿಮರ್ಶಾತ್ಮಕ ಬೋಧನಶಾಸ್ತ್ರದ ಒಂದು ಮುಖ್ಯಾಂಶವಾಗಿದೆ. ಅಂತಹ ಸಮಗ್ರ ಕಾರ್ಯಯೋಜನೆಯು ಸಮುದಾಯ ಸಂಘಟನೆಯ ಕುರಿತ ಒಂದು ಅಧ್ಯಯನ ಸರಣಿಯ ಅನುಕ್ರಮದ ಸಾಮರ್ಥ್ಯಕ್ಕೆ ಅತೀತವಾಗಿದ್ದು, ವಿದ್ಯಾರ್ಥಿಗಳು ಸಮುದಾಯ ಸಮಸ್ಯೆಗಳನ್ನು ಕುರಿತ ತಮ್ಮ ಪರ್ಯಾಯ ವ್ಯಾಖ್ಯಾನಕ್ಕೆ ಆತ್ಮವಿಶ್ವಾಸವನ್ನು ಬೆಳೆಸಿಕೊಳ್ಳಲು ಬಾಡಿಗೆದಾರರ ಸಂಘವನ್ನು ಒಂದು ಕಾರ್ಯಕ್ಷೇತ್ರವಾಗಿ ಬಳಸಿಕೊಳ್ಳಲು ಸಾಧ್ಯವಾಗಿದೆ. ಬಾಡಿಗೆದಾರರ ಸಂಘವನ್ನು, ಸಮುದಾಯದಲ್ಲಿ ಗಮನೀಯವಾದ ಪ್ರಭಾವ ಹಾಗೂ ಮನ್ನಣೆಯೊಂದಿಗೆ, ಬಾಡಿಗೆದಾರರ ನಂಬುಗೆಗೆ ಪಾತ್ರವಾದ, ಒಂದು ನ್ಯಾಯಬದ್ಧ ಸಂಘಟನೆಯನ್ನಾಗಿ ಸ್ಥಾಪಿಸುವ ಒಂದು ಸಾಮೂಹಿಕ ಪ್ರಯತ್ನದೊಂದಿಗೆ ಇದು ಆರಂಭವಾಗುತ್ತದೆ. ಅಂಥದ್ದನ್ನು ಸಾಧಿಸುವಲ್ಲಿ ಬಾಡಿಗೆದಾರರ ಸಮಸ್ಯೆಗಳ ಕಾರಣವನ್ನು ಕುರಿತ ಯಶಸ್ಸು ಮುಖ್ಯವಾಗುತ್ತದೆಯಲ್ಲದೆ, ಒಗ್ಗಟ್ಟಿನ ಲಕ್ಷಣಗಳ ಸಂವರ್ಧನೆ ಹಾಗೂ ಬಳಕೆಯೂ ಸಹ ಅಗತ್ಯವಾಗಿರುತ್ತದೆ. “ಸಂಕಲನದ” ಈ ಕಾರ್ಯತಂತ್ರವನ್ನು ವಿದ್ಯಾರ್ಥಿಗಳು ಅನೇಕ ರೀತಿಗಳಲ್ಲಿ ಬಳಸಿದ್ದಾರೆ.

ಜನಸಾಮಾನ್ಯರ ನವಜಾತ ಸಂಘಟನೆಯನ್ನು ಪ್ರತಿನಿಧಿಸುವಂತಹ ಸಂಕೇತದ ಸೃಜನೆಯು ಬಾಡಿಗೆದಾರರ ಸಂಘದ ಮೊಟ್ಟಮೊದಲ ಕಾರ್ಯಯೋಜನೆಗಳಲ್ಲಿ ಒಂದಾಗಿತ್ತು. ಅದನ್ನು ಅವರು ರೇಖಾಚಿತ್ರೀಯ (graphic) ವಿನ್ಯಾಸವನ್ನು ಕುರಿತ ಉಚ್ಚ ಶ್ರೇಣಿಯ ಕಲಾ ಅಧ್ಯಯನ ಸರಣಿಯ ಬೋಧಕ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳ ಸಹಕಾರದೊಂದಿಗೆ ಮಾಡಿಮುಗಿಸಿದರು. ಕಲಾ ಅಧ್ಯಯನ ಸರಣಿಯ ವಿದ್ಯಾರ್ಥಿಗಳು ಬಾಡಿಗೆದಾರರ ಸಂಘದ ಉದ್ದಿಶ್ಯಗಳು, ಆದರ್ಶಗಳು, ಹಾಗೂ ಪ್ರೇರಣೆಗಳ ವಿವರವಾದ ಹಿನ್ನೆಲೆಯನ್ನು ಪಡೆದು, ತಮ್ಮ ತರಗತಿಯ ಒಂದು ನಿಯೋಜಿತ ಕಾರ್ಯಭಾಗವೆಂಬಂತೆ ಪ್ರಾತಿನಿಧಿಕ ಲಾಂಛನವೊಂದನ್ನು ರೂಪಿಸಿದರು. ಸಮುದಾಯ ಸಂಘಟನಾ ಅಧ್ಯಯನ ಸರಣಿಯ ವಿದ್ಯಾರ್ಥಿಗಳು ಒಂದು ಸಾರ್ವಜನಿಕ ಪ್ರದರ್ಶನ ಹಾಗೂ ಸ್ಪರ್ಧೆಯನ್ನು ಏರ್ಪಡಿಸಿ ವಿನ್ಯಾಸದ ಸ್ಪರ್ಧೆಯಲ್ಲಿ ಗೆದ್ದವರಿಗೆ ಒಂದು ಸಣ್ಣ ಬಹುಮಾನವನ್ನು ಕೊಟ್ಟು ಗೌರವಿಸಿದರು. ಈ ಪ್ರಕ್ರಿಯೆಯು ಒಗ್ಗಟ್ಟಿನ ಒಂದು ಸಂಕೇತವನ್ನು ಉಂಟುಮಾಡಿದ್ದಲ್ಲದೆ ಬಾಡಿಗೆದಾರರ ಸಂಘವನ್ನು ವಿಶ್ವವಿದ್ಯಾನಿಲಯದಲ್ಲಿನ ಆವರಣದ ವಿಸ್ತೃತ ಸಮುದಾಯಕ್ಕೆ ಪರಿಚಯಿಸುವ ಕೆಲಸವನ್ನೂ ಮಾಡಿತು.

ನಾವು ಮೊದಲೇ ಗಮನಿಸಿದಂತೆ, ವಿದ್ಯಾರ್ಥಿಗಳು ಹಾಗೂ ಬಾಡಿಗೆದಾರರು ಸಾಪೇಕ್ಷವಾಗಿ ತಾತ್ಕಾಲಿಕವಾಗಿದ್ದು, ಸಕ್ರಿಯ ಕಾರ್ಯಕರ್ತರ ಬದಲಾವಣೆಯು ಸಂಘಟನೆಯ ಪ್ರಯತ್ನಗಳ ನಿರಂತರತೆಗೆ ತಡೆಯೊಡ್ಡಬಹುದು ಎಂಬುದು ವಿದ್ಯಾರ್ಥಿ-ಆಧಾರಿತ ಬಾಡಿಗೆದಾರರ ಸಂಘದ ರಾಚನಿಕ ಪರಿಮಿತಿಗಳಲ್ಲೊಂದಾಗಿದೆ. ಆದಾಗ್ಯೂ, ಒಂದು ಅವಿರತವಾದ ಹಾಗೂ ಗಮನೀಯವಾದ ಸಂಕೇತವು ಸಂಘಟನೆಯ ಸ್ಥಿರತೆ ಹಾಗೂ ಸಾಮೂಹಿಕ ಇತಿಹಾಸವನ್ನು ಯಶಸ್ವಿಯಾಗಿ ಪ್ರತಿನಿಧಿಸಬಲ್ಲದು ಎಂಬುದನ್ನು ನಾವು ಕಂಡುಕೊಂಡೆವು. ಹೀಗೆ, ಒಮ್ಮೆ ಆ ಲಾಂಛನವನ್ನು ಅಧಿಕೃತವಾಗಿ ಸ್ಥಾಪಿಸಿದ ಮೇಲೆ ಬಾಡಿಗೆದಾರರ ಸಂಘವು ಅದನ್ನು ತನ್ನ ಶೀರ್ಷಿತ ಹಾಳೆಗಳು, ಪತ್ರಿಕಾ ಪ್ರಕಟಣೆಗಳು, ಮಾಹಿತಿ ಸಂಚಿಕೆಯ ಫಲಕಗಳು, ಅಂಗಿ ಗುಂಡಿಗಳು, ಅಂಗಿಗಳು ಹಾಗೂ ಬ್ಯಾನರುಗಳಲ್ಲಿ ಬಳಸಿತು. ಈ ರೀತಿಯಲ್ಲಿ ಅದು, ಸಂಘಟನೆಯ ಸದಸ್ಯರಲ್ಲಿನ ಅತ್ಯಧಿಕ ಬದಲಾವಣೆಯ ನಂತರವೂ, ಸಂಘಟನೆಗೆ ಸಾಂಸ್ಕೃತಿಕ ಲಂಗರಿನಂತೆ ಮತ್ತು ಶಾಶ್ವತತೆ ಹಾಗೂ ನಿರಂತರತೆಯ ಒಂದು ಸಂಕೇತವಾಗಿ ಕೆಲಸ ಮಾಡಿದೆ.

ಸಮುದಾಯಕ್ಕೆ ಅವಕಾಶ ಕೊಡುವ ತಂತುಸಂಪರ್ಕ (cable), “ಭೂಗತ” ವಾರ್ತಾಪತ್ರಿಕೆ, ಹಾಗೂ ಒಂದು ಅಂತರ್ಜಾಲ ಜಾಲತಾಣಗಳ ರೂಪದಲ್ಲಿ ಪರ್ಯಾಯ ಮಾಧ್ಯಮದ ಸಂವರ್ಧನೆಯು ನಿಯಮಸಂಹಿತೆಯ ಇನ್ನೊಂದು ಕಾರ್ಯತಂತ್ರವಾಗಿದೆ. ಈ ಮೂರರಲ್ಲಿ, ಬಾಡಿಗೆದಾರರ ಸಂಘದ ಆಸಕ್ತಿಗಳನ್ನು ಮುನ್ನಡೆಸುವಲ್ಲಿ, ಜಾಲತಾಣವು ಅತಿ ಹೆಚ್ಚು ಸುಸ್ಥಿರ ಹಾಗೂ ಪರಿಣಾಮಕಾರಿ ಸಾಧನವೆನಿಸಿದೆ. ದೂರದರ್ಶನ ಹಾಗೂ ಮುದ್ರಣ ಮಾಧ್ಯಮಗಳಿಗೆ ವಿಭಿನ್ನವಾಗಿ, ಜಾಲತಾಣವು ಸಕ್ರಿಯ ಕಾರ್ಯಕರ್ತರು ಬದಲಾವಣೆಯಾದಾಗ ಅದೃಶ್ಯವಾಗುವುದಿಲ್ಲ. ವಿದ್ಯಾರ್ಥಿ ಸಂಘಟಕರು ಅತ್ಯಧಿಕವಾಗಿ ಬದಲಾವಣೆಯಾಗುವ ಕಾರಣ, ಇದು ನಿರ್ದಿಷ್ಟವಾಗಿ ಅದರ ಒಂದು ಪ್ರಮುಖ ಉತ್ತಮಿಕೆಯಾಗಿದೆ. ಜಾಲತಾಣವು ಪ್ರಾಥಮಿಕವಾಗಿ ಬಾಡಿಗೆಗೆ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ಸಹಾಯವನ್ನು ಬಯಸುವ ಬಾಡಿಗೆದಾರರಿಗೆ ಸಂಪನ್ಮೂಲದ ಕಾರ್ಯವನ್ನು ನಿರ್ವಹಿಸುವುದಾದರೂ,  ಸಂಘಟನೆಯ ಇತಿಹಾಸವನ್ನು ಬರೆಯಲು ಹಾಗೂ ಸಂರಕ್ಷಿಸಲು ಒಂದು ವೇದಿಕೆಯೂ ಹೌದು. ಪ್ರತಿ ವರ್ಷವೂ ಸಮುದಾಯದ ಭಾಗಗಳು (ನಗರ ಸಮಿತಿ, ಸುದ್ದಿ ಮಾಧ್ಯಮ ಹಾಗೂ ವಿಶ್ವವಿದ್ಯಾನಿಲಯದ ಆಡಳಿತಾಧಿಕಾರಿಗಳು), ಬಾಡಿಗೆದಾರರ ಸಂಘವನ್ನು ಒಂದು “ಸಂಘ” ಅಥವಾ “ಸೇವಾ ಸಂಘಟನೆ” ಎಂಬುದಾಗಿ ವ್ಯಾಖ್ಯಾನಿಸಲು ಪ್ರಯತ್ನಿಸಿದಾಗ ವಿದ್ಯಾರ್ಥಿಗಳು ಒಂದಷ್ಟು ಹತಾಶೆಯನ್ನು ಅನುಭವಿಸುತ್ತಾರೆ. ಇಂತಹ ವ್ಯಾಖ್ಯಾನಗಳ ಗುಟ್ಟನ್ನು ಹೊರಗೆಡಹಲು ಮತ್ತು ಅಧಿಕಾರಿವರ್ಗದವರು ಸಾಂಪ್ರದಾಯಿಕ ಹೆಸರುಗಳನ್ನು ಅವು ಹೆಚ್ಚು ಪರಿಚಿತವಾಗಿವೆ ಹಾಗೂ ಕಡಿಮೆ ಅಪಾಯಕಾರಿಯಾಗಿವೆ ಎಂಬ ಕಾರಣಕ್ಕಾಗಿ ಹೆಚ್ಚು ಬಯಸುತ್ತಾರೆ ಎಂದು ಗುರುತಿಸಲು ಸಂಘದ ಸದಸ್ಯರಿಗೆ ಸಾಧ್ಯವಾಗುವುದಾದ್ದರಿಂದ ಈ ಅನುಭವವು ಶಿಕ್ಷಾಪ್ರದವೆನಿಸಿದೆ (instructive). ಕೊನೆಯಲ್ಲಿ, ತಮ್ಮ ಹೋರಾಟ ಕಥನದ ನಿಗ್ರಹವು ಪ್ರತಿ-ಅಧಿನಾಯಕತ್ವದ ಸಂವರ್ಧನೆಯಲ್ಲಿ ನಿರ್ಣಾಯಕವಾಗಿದೆ ಎಂಬುದನ್ನು ವಿದ್ಯಾರ್ಥಿಗಳು ಕಲಿತುಕೊಳ್ಳುತ್ತಾರೆ.

**ವಿದ್ಯಾರ್ಥಿ ಮೌಲ್ಯಮಾಪನಗಳು**

ಪ್ರತಿಯೊಬ್ಬ ವಿದ್ಯಾರ್ಥಿಗೂ ವ್ಯಕ್ತಿಗತ ಕಾರ್ಯನಿರ್ವಹಣೆಯ ಒಂದು ಸಂಕ್ಷಿಪ್ತ ಮಾಪನದ ನಿಟ್ಟಿನಲ್ಲಿ, ಒಂದು ಅಧಿಕೃತವಾದ ಶ್ರೇಣಿಯನ್ನು ನೀಡಬೇಕು ಎಂಬುದು ವಿಮರ್ಶಾತ್ಮಕ ಬೋಧನಶಾಸ್ತ್ರದ ಕಾರ್ಯಾನ್ವಯನದ ರಾಚನಿಕ ಸವಾಲುಗಳಲ್ಲಿ ಒಂದಾಗಿದೆ. ಸಾಂಪ್ರದಾಯಿಕ ಶ್ರೇಣೀಕರಣ ನೀತಿಗಳು ವ್ಯಕ್ತಿಗತವಾದ ಕಲಿಕೆಯನ್ನು ಪ್ರಾತಿನಿಧಿಕವಾಗಿ ಪ್ರೋತ್ಸಾಹಿಸುತ್ತವೆ ಮತ್ತು ಅವುಗಳ ಸಂರಚನೆಯು, ವಿದ್ಯಾರ್ಥಿಗಳ ನಡುವೆ ಸ್ಪರ್ಧೆಯನ್ನು ಬೆಂಬಲಿಸುವ ರೀತಿಯಲ್ಲಿರಬಹುದು. ಕೆಲವು ವಿಪರೀತದ ಸಂದರ್ಭಗಳಲ್ಲಿ ವಿದ್ಯಾರ್ಥಿಗಳು ಆ ಶ್ರೇಣಿಯ ಬಗ್ಗೆಯೇ ಅತಿಶ್ರದ್ಧೆಯ ಸಂಬಂಧವನ್ನು ಬೆಳೆಸಿಕೊಂಡು ಕಲಿಕೆಯ ಪ್ರಕ್ರಿಯೆಯಿಂದ ವಿಮುಖರಾಗಬಹುದು. ನಮ್ಮ ಸಮುದಾಯ ಸಂಘಟನೆಯ ಅಧ್ಯಯನ ಸರಣಿಯ ಅನುಕ್ರಮದಲ್ಲಿ ಈ ಸವಾಲುಗಳನ್ನು ನಾವು ಗುರುತಿಸಿ, ಸಮುದಾಯ ಶಕ್ತಿಗೆ ಅತ್ಯಂತ ನಿರ್ಣಾಯಕವೆನಿಸಿದ ಸಮೂಹದ ಒಗ್ಗಟ್ಟನ್ನು ಹಾಳುಮಾಡದೆ ಸಂವಾದ ಹಾಗೂ ಮೌಲ್ಯದ ನಿಗದೀಕರಣವನ್ನು ಪ್ರೋತ್ಸಾಹಿಸುವಂತಹ ಪರ್ಯಾಯ ಮೌಲ್ಯಾಂಕನ ನೀತಿಯನ್ನು ಹುಟ್ಟುಹಾಕಿದೆವು. ವಾಸ್ತವವಾಗಿ, ನಾವು ಬಳಸುವ ಈ ಪ್ರಕ್ರಿಯೆಯು ಅಧ್ಯಯನ ಸರಣಿಯ ಅನುಕ್ರಮದ ಪ್ರಥಮವರ್ಷದಲ್ಲಿನ ವಿದ್ಯಾರ್ಥಿಗಳಿಂದಲೇ

ಮೊದಲಿಗೆ ಸಿದ್ಧಗೊಳಿಸಲಾಗಿತ್ತು. ವರ್ಷಗಳು ಕಳೆದಂತೆ ಅದನ್ನು ಅನೇಕ ರೀತಿಗಳಲ್ಲಿ "ಸಂಸ್ಕರಿಸಿದ್ದು," ಪ್ರತಿ ಹೊಸ ವಿದ್ಯಾರ್ಥಿ ವೃಂದದಿಂದಲೂ ಮರುಸ್ವೀಕರಿಸಲ್ಪಟ್ಟಿದೆ. ನಮ್ಮ ಮಾರ್ಗವು, ಸಾಕಷ್ಟು ಅಧಿಕಾರ ಹಾಗೂ ಜವಾಬ್ದಾರಿಗಳನ್ನು ವಿದ್ಯಾರ್ಥಿಗಳಿಗೆ ವರ್ಗಾಯಿಸುತ್ತದೆ. ಅವರು, ಸರ್ವಸಾಮಾನ್ಯವಾದ ಮೌಲ್ಯಮಾಪನವೊಂದರ ದಸ್ತಾವೇಜಿನಲ್ಲಿ ಸಾಮೂಹಿಕವಾಗಿ ವ್ಯಾಖ್ಯಾನಿಸಲ್ಪಟ್ಟ ಮೌಲ್ಯಾಂಕನದ ಮಾನದಂಡಗಳನ್ನು ಒಪ್ಪುವಂತಹ ಒಂದು ಸರ್ವಸಮ್ಮತ ಮಾದರಿಯಡಿಯಲ್ಲಿ ತಮ್ಮನ್ನು ನಿರ್ಬಂಧಿಸಿಕೊಳ್ಳುತ್ತಾರೆ.

ಸಮುದಾಯ ಸಂಘಟನೆಯ ಅಧ್ಯಯನ ಸರಣಿಯ ಅನುಕ್ರಮದಲ್ಲಿ ಮೌಲ್ಯಾಂಕನದ ಮಾನದಂಡಗಳನ್ನು ವರ್ಷದಿಂದ ವರ್ಷಕ್ಕೆ ಕಿಂಚಿತ್ ಬದಲಾವಣೆ ಮಾಡಲಾಗಿದೆಯಾದರೂ ಮುಖ್ಯ ತತ್ತ್ವಗಳು ಹಾಗೆಯೇ ಉಳಿದಿವೆ. ಸಾಮಾನ್ಯವಾಗಿ, ಈ ಮುಂದಿನ ಮಾರ್ಗದರ್ಶಿ ಊಹನಗಳಿಗೆ (assumption) ವಿದ್ಯಾರ್ಥಿಗಳು ಒಪ್ಪಿದ್ದಾರೆ: 1) ಎಲ್ಲಾ ವಿದ್ಯಾರ್ಥಿಗಳೂ ಬಾಡಿಗೆದಾರರ ಸಂಘದ ಯಶಸ್ಸಿಗೆ ಬದ್ಧರಾಗಿದ್ದಾರೆ ಮತ್ತು ಆ ಕಾರಣಕ್ಕಾಗಿ ಪ್ರತಿಯೊಬ್ಬ ವಿದ್ಯಾರ್ಥಿಯೂ ತರಗತಿಯನ್ನು "ಎ" ಶ್ರೇಣಿಯೊಂದಿಗೆ ಆರಂಭಿಸುತ್ತಾನೆ, 2) ಎಲ್ಲಾ ವಿದ್ಯಾರ್ಥಿಗಳೂ ಸಂಘಟನೆಯ ವೈಯಕ್ತಿಕ ಹಾಗೂ ಸಾಮೂಹಿಕ ಗುರಿಗಳು ಹಾಗೂ ನಿರೀಕ್ಷೆಗಳಿಗೆ ಸಮ್ಮತಿಸುತ್ತಾರೆ ಮತ್ತು ಇವುಗಳನ್ನು ಸಾಧಿಸಲು ಸಮಾನವಾಗಿ ಕೆಲಸ ಮಾಡುತ್ತಾರೆ, 3) ಗುಂಪಿನ ನಿರೀಕ್ಷೆಗಳನ್ನು ತಲುಪಲು ಕೆಲವು ವಿದ್ಯಾರ್ಥಿಗಳು ವಿವಿಧ ಕಾರಣಗಳಿಂದಾಗಿ ವಿಫಲರಾಗುತ್ತಾರೆ ಮತ್ತು ವಿದ್ಯಾರ್ಥಿಗಳು ವೈಯಕ್ತಿಕ ಅಥವಾ ಗುಂಪಿನ ನಿರೀಕ್ಷೆಗಳನ್ನು ತಲುಪಲು ವಿಫಲರಾದಾಗ, ಆ ಸಮಸ್ಯೆಯ ಕುರಿತು ಗುಂಪಿನ ಸಭೆಯಲ್ಲಿ ಚರ್ಚಿಸತಕ್ಕದ್ದು. 4) ವಿದ್ಯಾರ್ಥಿಯು, ಗುಂಪಿನ ಗುರಿಗಳು ಅಥವಾ ವೈಯಕ್ತಿಕ ಸಾಧನೆಯ ಗುರಿಗಳಿಗೆ ಸಂಬಂಧಿಸಿದ ನಿರೀಕ್ಷೆಗಳನ್ನು ತಲುಪಿಲ್ಲವೆಂಬ ಬಗ್ಗೆ ಗುಂಪಿನ ಒಮ್ಮತವಿದ್ದಾಗ ಪ್ರಾಧ್ಯಾಪಕರಿಗೆ ವಿದ್ಯಾರ್ಥಿಯ ಶ್ರೇಣಿಯನ್ನು ತಗ್ಗಿಸಲು ಅದು ಅಧಿಕಾರವನ್ನು ನೀಡುತ್ತದೆ.

ಗುಂಪಿನ ಗುರಿಗಳ ಬಗ್ಗೆ ತಮ್ಮ ಕೊಡುಗೆಗಳ ಕುರಿತ ಒಂದು "ಸಂಪುಟ"ವನ್ನು (portfolio) ಸಂಗ್ರಹಿಸಲು ಮತ್ತು ತಮ್ಮ ವ್ಯಕ್ತಿಗತ ಆಲೋಚನೆಗಳು ಹಾಗೂ ಅನುಭವಗಳ ಬಗ್ಗೆ ಒಂದು ದಿನಚರಿಯನ್ನು ನಿರ್ವಹಿಸಲೂ ವಿದ್ಯಾರ್ಥಿಗಳು ಒಪ್ಪಿಕೊಳ್ಳುತ್ತಾರೆ. ಇವು ಸಂಘಟನೆಯ ದಾಖಲೀಕೃತ ಇತಿಹಾಸದ ಭಾಗವಾಗುತ್ತವೆ ಮತ್ತು ಆನಂತರದ ವಿದ್ಯಾರ್ಥಿವೃಂದದ ಶಿಕ್ಷಣಕ್ಕಾಗಿ ಬಳಸಲಾಗುತ್ತವೆ. ವಿದ್ಯಾರ್ಥಿಗಳು ಸರ್ವಸಮ್ಮತ ಮಾದರಿಯನ್ನು ಬಳಸಿ ಮೌಲ್ಯಮಾಪನದ ಮಾನದಂಡಗಳು ಹಾಗೂ ಪ್ರಕ್ರಿಯೆಗಳನ್ನು ನೆಲೆಗೊಳಿಸುವುದರಿಂದ, ಶ್ರೇಣಿಗಳ ಕುರಿತ ವಿವಾದಗಳು ತೀರಾ ಅಪರೂಪವಾಗಿರುತ್ತವೆ. ವಾಸ್ತವವಾಗಿ, ಸಹಭಾಜಿತ (shared) ಗುಂಪು ಹಾಗೂ ಗುರಿಗಳಿಗಾಗಿ ಏಕಾಗ್ರಗೊಂಡ ಉತ್ಸಾಹವು ಮೌಲ್ಯಮಾಪನ ಹಾಗೂ ಶ್ರೇಣೀಕರಣದೊಂದಿಗಿನ ಕಾಳಜಿಯನ್ನು ಎಷ್ಟೊಂದು ಹಿನ್ನೆಲೆಗೆ ತಳ್ಳುತ್ತದೆಯೆಂದರೆ, ಅದನ್ನು ಒಂದು ಚರ್ಚೆಯ ಅಂಶವಾಗಿ ಪ್ರಸ್ತುತಪಡಿಸುವುದೇ ಅಪರೂಪವೆಂಬುದನ್ನು ನಾವು ಕಂಡುಕೊಂಡಿದ್ದೇವೆ.

**ಉಪಸಂಹಾರ**

ಸಮಾಜಶಾಸ್ತ್ರದ ಬೋಧನೆಯಲ್ಲಿ ವಿಮರ್ಶಾತ್ಮಕ ಬೋಧನಶಾಸ್ತ್ರದ ಅಳವಡಿಕೆಯನ್ನು ಪ್ರತಿಪಾದಿಸುವುದು ಈ ಪತ್ರಿಕೆಯಲ್ಲಿನ ನಮ್ಮ ಗುರಿಯಾಗಿದೆ. ಜ್ಞಾನೋದಯ ಚಿಂತಕರು ಹಾಗೂ ಸಮಾಜಶಾಸ್ತ್ರದ ಸ್ಥಾಪಕರಿಗೆ ಪ್ರೇರಣೆ ನೀಡಿದಂತಹ ವಿಮೋಚನೆಯ ಭರವಸೆಗಳನ್ನು ಈಡೇರಿಸಬೇಕೆಂದಾದರೆ, ಉನ್ನತ ಶಿಕ್ಷಣವು ಮಧ್ಯಮವರ್ಗದ ಅಧಿನಾಯಕತ್ವದ ಪುನರ್‌ಸೃಜನೆಗಾಗಿ ಕೆಲಸಮಾಡುವಂತಹ ಶ್ರೇಣಿ ವ್ಯವಸ್ಥೆಯ ಅಧಿಕಾರಪರ ಮಾದರಿಯಿಂದ ದೂರವಾಗತಕ್ಕದ್ದು.

ವೈಯಕ್ತಿಕ ಹಾಗೂ ಸಾಮಾಜಿಕ ಪರಿವರ್ತನೆಯ ಮೂಲಕ ದಾಸತ್ವದ ಮುಕ್ತಿಯನ್ನು ಸಾಧ್ಯವಾಗಿಸುವುದು ವಿಮರ್ಶಾತ್ಮಕ ಬೋಧನಶಾಸ್ತ್ರದ ಗುರಿಯಾಗಿದೆ. ಅಧ್ಯಯನ ಸರಣಿಯ ಮೌಲ್ಯಾಂಕನದ ಮಾನದಂಡದ ಸಾಧನಗಳನ್ನು ಬಳಸಿ ಈ ನಿಟ್ಟಿನ ಯಶಸ್ಸನ್ನು ಅಂದಾಜಿಸುವುದು ಕಷ್ಟ. ನೂತನ ಸಕ್ರಿಯ ತಾದಾತ್ಮ್ಯಗಳಿಂದ ವ್ಯಾಖ್ಯಾನಿಸಲಾದ "ರಾಜಕೀಯ ಸ್ವಂತಿಕೆ"ಯ ಮೂಲಭೂತ ಸಂವರ್ಧನೆಯೆಡೆಗಿನ ಮನೋಭಾವದ ಪಲ್ಲಟಕ್ಕಿಂತಲೂ ಅತೀತವಾದ ವಿದ್ಯಾರ್ಥಿ ಪ್ರಜ್ಞೆಯಲ್ಲಿನ ಬದಲಾವಣೆಯನ್ನು ನಾವು ನಿರೀಕ್ಷಿಸುತ್ತಿದ್ದೇವೆ (Callero 2003). ನಮ್ಮ ಅಧ್ಯಯನ ಸರಣಿಯ ಪರಿಮಾಣಾತ್ಮಕ

ಮೌಲ್ಯಮಾಪನಗಳು, ಅವಿರತವಾಗಿ ವಿಶ್ವವಿದ್ಯಾನಿಲಯದ ಅತ್ಯುನ್ನತ ಶೇ.5ರ ಸ್ತರದಲ್ಲಿ, ಹೆಚ್ಚು ಸಕಾರಾತ್ಮಕವಾದ ಅಂಕಗಳನ್ನು ಪ್ರದರ್ಶಿಸುತ್ತಿವೆಯಾದರೂ, ಬಹಳಷ್ಟು ವಿದ್ಯಾರ್ಥಿಗಳು ತಮ್ಮ ಜೀವನವೃತ್ತಿಯ ಆಯ್ಕೆಗಳು, ರಾಜಕೀಯ ಒಲವು, ಅಥವಾ ಸಮುದಾಯ ಸಕ್ರಿಯತೆಗಳು ವಿಮರ್ಶಾತ್ಮಕ ಬೋಧನಶಾಸ್ತ್ರದ ತತ್ತ್ವಗಳಿಗೆ ಸಮಂಜಸವಾದ ರೀತಿಯಲ್ಲಿ ಪರಿವರ್ತನೆ ಹೊಂದಿವೆ ಎಂಬುದನ್ನು ಸೂಚಿಸುವಂತಹ ಲಿಖಿತ ಹೇಳಿಕೆಗಳನ್ನು ನೀಡಲು ಮುಂದಾಗುತ್ತಾರೆ ಎಂಬುದು ನಮ್ಮ ಯಶಸ್ಸಿನ ಉತ್ತಮ ಸೂಚಕವಾಗಿದೆ. ತೀರಾ ಇತ್ತೀಚಿನ ಅಧ್ಯಯನ ಅವಧಿಯ ಕೊನೆಯಲ್ಲಿ ಸಂಗ್ರಹಿಸಲಾದ ಮೂರು ವಿಭಿನ್ನ ವೈಯಕ್ತಿಕ ಮಲ್ಯಾಂಕನದ ನಿರ್ಧಾರಣಗಳಿಂದ ತೆಗೆದುಕೊಂಡ ಈ ಕೆಳಗಿನ ಹೇಳಿಕೆಗಳು ಈ ಮಾತನ್ನು ಸಮರ್ಥಿಸುತ್ತವೆ. ಆ ಮೂವರು ವಿದ್ಯಾರ್ಥಿಗಳೂ ಮೂರು-ಅಧ್ಯಯನ ಅವಧಿಗಳ ಅನುಕ್ರಮವನ್ನು ಮುಗಿಸಿದ್ದರು ಮತ್ತು ಆ ಕಾರಣದಿಂದಾಗಿ ಅವರು ಇಡೀ ಶೈಕ್ಷಣಿಕ ವರ್ಷದಲ್ಲಿನ Monmouth Independence Tenants Unionನ (MITU) ಒಂದು ಭಾಗವಾಗಿದ್ದರು.

> ಸಮುದಾಯದಲ್ಲಿ ನನ್ನ ತೊಡಗಿಸಿಕೊಳ್ಳುವಿಕೆಯು ಬಹಳಷ್ಟು ಪರಿವರ್ತನೆಯಾಗಿದೆ. ಮೊದಲು ನಾನು ನನಗೆ ನೇರವಾಗಿ ಪರಿಣಾಮ ಬೀರುವಂತಹ ವಿಶ್ವವಿದ್ಯಾನಿಲಯದ ಆವರಣದೊಳಗಿನ ಸಂಗತಿಗಳ ಬಗ್ಗೆ ಮಾತ್ರ ತೊಡಗಿಸಿಕೊಂಡಿದ್ದೆ ಮತ್ತು ಕಾಳಜಿ ಹೊಂದಿದ್ದೆ. ಸಮುದಾಯ ಸಂಘಟನೆಯಿಂದಾಗಿ, ನಾನು ಬದುಕುತ್ತಿರುವ ಸಮುದಾಯದ ಮೇಲೆ ನಕಾರಾತ್ಮಕವಾಗಿ ಪರಿಣಾಮ ಬೀರಬಹುದಾದಂತಹ ಇತರ ಸಂಗತಿಗಳು ಇವೆ ಎಂಬುದನ್ನು ನಾನು ಕಲಿತಿದ್ದೇನೆ.

> MITU ಜೊತೆಗಿನ ನನ್ನ ಕೆಲಸವು ನನ್ನ ರಾಜಕೀಯದ ಮೇಲೆ ಹೆಚ್ಚಿನ ಪರಿಣಾಮಗಳನ್ನು ಹೊಂದಿತ್ತು... MITU ಜೊತೆಗೆ ಸಕ್ರಿಯವಾಗಿದ್ದಾಗಿನಿಂದಲೂ Latinos Unidos Siempre ಮತ್ತು Pineros y Campesinos Unidos del Noroeste[2] ಜೊತೆಗೆ ಹೆಚ್ಚು ಸಕ್ರಿಯವಾಗಿರಲು ಆರಂಭಿಸಿದೆ.

> MITU ಜೊತೆಗೆ ನಾನು ಕೆಲಸವನ್ನು ನಿರ್ವಹಿಸಿದ ಕಾರಣ, ರಾಜಕೀಯ ಹಾಗೂ ಸಮುದಾಯದ ಸಕ್ರಿಯತೆಯನ್ನು ಕುರಿತ ನನ್ನ ದೃಷ್ಟಿಕೋನದ ಮೇಲೆ ಹೆಚ್ಚಿನ ಪರಿಣಾಮವುಂಟಾಗಿದೆ.... ನಾನು ಒಬ್ಬ ಶಿಕ್ಷಕನಾಗಲು ಯೋಜನೆಯನ್ನು ರೂಪಿಸುತ್ತಿದ್ದೇನೆ ಮತ್ತು ಕೆಲಸದ ಸ್ಥಾನದಲ್ಲಿ ಸುಧಾರಣೆಗಳನ್ನು ತರುವ ನಿಟ್ಟಿನಲ್ಲಿ, ಅಧಿಕಾರಿ ವರ್ಗದವರೊಂದಿಗೆ ಸಂಘರ್ಷಕ್ಕಿಳಿಯುವ ಸಂಘವೊಂದರ ಭಾಗವಾದಾಗ ಇಲ್ಲಿನ ಕಲಿಕೆಗಳು ನನಗೆ ಸಹಾಯಕವಾಗುತ್ತವೆ.

ಅಷ್ಟೇ ಅಲ್ಲದೆ, ನಮ್ಮ ಅಧ್ಯಯನ ಸರಣಿಗಳು ಸಮುದಾಯದಲ್ಲಿ ಸಕಾರಾತ್ಮಕ ಸಾಮಾಜಿಕ ಪರಿವರ್ತನೆಯ ವಾಹಕವಾಗಿವೆ ಎಂಬುದನ್ನೂ ನಾವು ತಿಳಿದುಕೊಂಡಿದ್ದೇವೆ. ನಮ್ಮ ಪ್ರಯತ್ನಗಳ ಫಲವಾಗಿ ಬಾಡಿಗೆ ವಾಸಗೃಹ ವ್ಯವಸ್ಥೆಯು ಹಿಂದಿಗಿಂತ ಸುರಕ್ಷಿತ ಹಾಗೂ ಹೆಚ್ಚು ನಿಕಟವಾಗಿ ನಿಯಂತ್ರಿತವಾಗಿದೆ ಎಂಬುದರಲ್ಲಿ ಅನುಮಾನವಿಲ್ಲ. ಬಾಡಿಗೆದಾರರ ಸಂಘವು ಮುಖ್ಯವಾದ ಪ್ರವರ್ತಕ (enforcement) ನಡವಳಿಕೆಗಳನ್ನು ನೆಲೆಗೊಳಿಸುವಲ್ಲಿ ಸಹಾಯಮಾಡಿದೆ, ನಗರದ ಅಧಿಕಾರಿವರ್ಗದವರು ನಿಯತವಾಗಿ ಬಾಡಿಗೆದಾರರ ಸಂಘದ ಅಭಿಪ್ರಾಯವನ್ನು ಪಡೆಯುತ್ತಾರಲ್ಲದೆ, ಇದು, ಮನೆವಾಸಕ್ಕೆ ಸಂಬಂಧಿಸಿದ ಅನ್ಯಾಯವನ್ನು ವಿರೋಧಿಸುವಲ್ಲಿ ಬಾಡಿಗೆದಾರರಿಗೆ ಪರಿಗಣಿಸತಕ್ಕ ಸಹಾಯವೆನಿಸಿದೆ.

ವಿಮರ್ಶಾತ್ಮಕ ಬೋಧನಶಾಸ್ತ್ರವನ್ನು ಕುರಿತ ನಮ್ಮ ಪ್ರತಿಪಾದನೆ ಹಾಗೂ ನಮ್ಮ ಪಠ್ಯಕ್ರಮದ ಉದಾಹರಣೆಗಳು ಸಮಾಜಶಾಸ್ತ್ರದ ಬೋಧನೆಗೆ ಹೆಚ್ಚಿನ ಮಾನ್ಯತೆಯನ್ನು ಉತ್ತೇಜಿಸಲು ಮತ್ತು ಈ ಸುಧಾರವಾದಿ ಒಲವನ್ನು ಅಳವಡಿಸಿಕೊಳ್ಳಲು ಸಹಾಯಮಾಡುತ್ತವೆ ಎಂದು ನಾವು ಆಶಿಸುತ್ತೇವೆ. ಪೀಠಿಕೆಯಲ್ಲಿ ನಾವು ಗಮನಿಸಿದಂತೆ, ಹಲವು ಅಸಾಂಪ್ರದಾಯಿಕ ಅಧ್ಯಯನ ಸರಣಿಗಳನ್ನು ಒಳಗೊಂಡ ಒಂದು ಪಠ್ಯಕ್ರಮವನ್ನು ನಾವು ರೂಪಿಸಿದ್ದಾಗ್ಯೂ, ವಿಮರ್ಶಾತ್ಮಕ

---

[2] Latinos Unidos Siempre ಎಂಬುದು ಲ್ಯಾಟಿನೊ ರಾಜಕೀಯ ಮತ್ತು ಸಂಸ್ಕೃತಿಯ ವಕಾಲತ್ತು ವಹಿಸುವ ಸಂಘಟನೆಯಾಗಿದ್ದು, Pineros y Campesinos Unidos del Noroeste ಎಂಬುದು, ಒರೆಗಾನ್ Willamette Valleyಯಲ್ಲಿ ಸ್ಥಾಪಿತಗೊಂಡಿರುವ ತೋಟದ ಕೆಲಸಗಾರರ ಸಂಘವಾಗಿದೆ.

ಬೋಧನಶಾಸ್ತ್ರದ ಮೂಲತತ್ತ್ವಗಳನ್ನು ಪಠ್ಯಕ್ರಮದಾದ್ಯಂತ ಅನ್ವಯಿಸಬಹುದೆಂದು ನಾವು ನಂಬುತ್ತೇವೆ. ಜನಸಾಮಾನ್ಯರ ಸಮುದಾಯ ಸಂಘಟನೆಯೊಂದಿಗೆ ಸಹಕರಿಸುವ ಅಥವಾ ಅದನ್ನು ಸಂವರ್ಧಿಸುವ ಮೂಲಕ ಮತ್ತು ಸಂವಾದ, ವಿಮರ್ಶೆ, ಪ್ರತಿ-ಅಧಿನಾಯಕತ್ವ, ಹಾಗೂ ಕಾರ್ಯಾನ್ವಯನಗಳಿಗೆ ಒತ್ತು ನೀಡುವ ಮೂಲಕ ಸಾಂಪ್ರದಾಯಿಕ ಅಧ್ಯಯನ ಸರಣಿಗಳು ಪರಿವರ್ತನೆಯ ವಾಹಕಗಳಾಗಬಹುದು. ಉದಾಹರಣೆಗೆ, ಸಂಶೋಧನ ವಿಧಾನಗಳ ಒಂದು ಅಧ್ಯಯನ ಸರಣಿಯು ದಮನಿಸಲಾದ ಗುಂಪೊಂದರ ಆಸಕ್ತಿಗಳನ್ನು ಪ್ರೋತ್ಸಾಹಿಸುವ ಸಮುದಾಯ ಸಮೀಕ್ಷೆಯನ್ನು ರೂಪಿಸಬಹುದು ಅಥವಾ ಸಂಘಟನೆಗೆ ಸಂಬಂಧಿಸಿದ ಸಂಗತಿಗಳನ್ನು ಗುರುತಿಸುವ ಆಧಾರವಾಗಿ ಕೆಲಸಮಾಡಬಹುದು. ಒಂದು ಸಾಮಾಜಿಕ ಸಿದ್ಧಾಂತದ ಅಧ್ಯಯನ ಸರಣಿಯು ಸ್ಥಳೀಯವಾಗಿ ಪ್ರಮುಖವೆನಿಸಿದ ಸಂಗತಿಯನ್ನು (ಉತ್ಪಾದನಾ ಘಟಕವೊಂದರ ಪ್ರಮಾಣದಲ್ಲಿನ ಕಡಿತ, ಆರೋಗ್ಯ ವಿಮೆ ಅಥವಾ ಶಿಶು ಪಾಲನೆಯ ಕೊರತೆ) ಗುರುತಿಸುವುದರೊಂದಿಗೆ ಆರಂಭವಾಗಬಹುದು ಮತ್ತು ಸಮಸ್ಯೆಗಳ ಬಗ್ಗೆ ಹೆಚ್ಚಿನ ಪ್ರಬುದ್ಧ ತಿಳುವಳಿಕೆಯನ್ನು ಸಾಧಿಸಲು, ಪರಿಹಾರಗಳನ್ನು ಹುಡುಕಲು, ಮತ್ತು ಪರಿವರ್ತನೆಗಾಗಿ ಕಾರ್ಯನೀತಿಗಳನ್ನು ಶಿಫಾರಸುಮಾಡಲು ನಿರ್ದಿಷ್ಟ ಸಿದ್ಧಾಂತಗಳನ್ನು ಬಳಸಬಹುದು.

ಅನುಕ್ರಮಿಕ (successive) ವಿದ್ಯಾರ್ಥಿವೃಂದದ ಕಾರ್ಯದ ನಿಟ್ಟಿನಲ್ಲಿ ರೂಪುಗೊಳ್ಳುವ ಮತ್ತು ವಿದ್ಯಾರ್ಥಿಗಳಿಗೆ ಒಂದು ಸುದೀರ್ಘ ಅವಧಿಯವರೆಗೆ ಕಾರ್ಯಯೋಜನೆಗಳಲ್ಲಿ ತೊಡಗಿರಲು ಸದವಕಾಶವನ್ನು ನೀಡುವ ಸಂಚಿತ ಕಾರ್ಯನೀತಿಯಲ್ಲಿ ನಾವು ಒಂದು ನಿರ್ದಿಷ್ಟ ಮೌಲ್ಯವನ್ನು ಕಂಡುಕೊಂಡಿದ್ದೇವೆ. ಒಂದು ಶೈಕ್ಷಣಿಕ ಅಧ್ಯಯನ ಅವಧಿ ಅಥವಾ ಒಂದು ಶೈಕ್ಷಣಿಕ ವರ್ಷದ ಫಲವಾಗಿ ಸಮುದಾಯದ ಮತ್ತು ವೈಯಕ್ತಿಕ ಪರಿವರ್ತನೆಯು ಘಟಿಸುವುದು ಅಪರೂಪ. ಆದರೆ ಹಲವಾರು ಅಧ್ಯಯನ ಅವಧಿಗಳ ಮತ್ತು ಹಲವಾರು ವರ್ಷಗಳ ಅವಧಿಯ ವಿದ್ಯಾರ್ಥಿಗಳ ಬಹು ವಿಧದ ಅಲೆಗಳಿಂದ ಯೋಜನೆಯೊಂದು ಸ್ಥಿರೀಕೃತಗೊಂಡಾಗ, ನೈಜ ಪರಿವರ್ತನೆಯು ಸಾಧ್ಯವಾಗುತ್ತದೆ.

ಸಮಾಜಶಾಸ್ತ್ರದ ಪಠ್ಯಕ್ರಮದಲ್ಲಿ ವಿಮರ್ಶಾತ್ಮಕ ಬೋಧನಶಾಸ್ತ್ರವನ್ನು ಅನ್ವಯಿಸುವಲ್ಲಿನ ಸಂಭಾವ್ಯ ಕಠಿಣತೆಗಳನ್ನು ನಾವು ಮನಗಾಣುತ್ತೇವೆ. ಮೊದಲಿಗೆ, ಇಂತಹ ಸಮುದಾಯ ಸಂಘಟನೆಯ ಅಧ್ಯಯನ ಸರಣಿಗಳನ್ನು ಅಳವಡಿಸುವಲ್ಲಿ ಹೆಚ್ಚು ತ್ರಾಸದಾಯಕವೆನಿಸುವ ಅಡೆತಡೆಗಳು ಕೆಲವು ವಿಶ್ವವಿದ್ಯಾನಿಲಯದ ಆವರಣಗಳಲ್ಲಿ ಇರಬಹುದು. ಉದಾಹರಣೆಗೆ, ಓರ್ವ ವಿಭಾಗ ಮುಖ್ಯಸ್ಥರು ಕಾನೂನು ಮೊಕದ್ದಮೆಗಳನ್ನು ತೋರಿಸಿ ಹೆದರಿಸುವಂತಹ ಭೂಮಾಲೀಕರ ಸಮುದಾಯದ ದೂರುಗಳಿಗೆ, ತಮ್ಮ ಜಾಹೀರಾತುಗಳನ್ನು ಹಿಂತೆಗೆದುಕೊಳ್ಳುವ ಜಾಹೀರಾತುದಾರರಿಗೆ, ಅಥವಾ ಪ್ರಶ್ನೆಮಾಡಲೆಂದು ಕರೆಮಾಡುವಂತಹ ರೂಢಿವಾದಿ ಮಾಜಿ ವಿದ್ಯಾರ್ಥಿಗಳಿಗೆ ಅತಿರೇಕದ ಪ್ರತಿಕ್ರಿಯೆ ನೀಡಬಹುದು. ಮತ್ತು ನೇಮಕಗೊಳ್ಳದಿರುವಂತಹ ಬೋಧಕ ಸಿಬ್ಬಂದಿಯು ವಿವಾದಗಳನ್ನು ಸೃಜಿಸಬಹುದಾದ ಒಂದು ಕಾರ್ಯಯೋಜನೆಯನ್ನು ಆರಂಭಿಸುವ ಮುಂಚೆ ಎರಡು ಬಾರಿ ಆಲೋಚಿಸಬಹುದು (ಹಿಂಜರಿಯಬಹುದು). ಹಾಗಿದ್ದರೂ, ನಮ್ಮ ಆವರಣದಲ್ಲಿ ಈ ಪ್ರಕಾರದ ಆಡಳಿತ ನಿಯಂತ್ರಣ ಅಥವಾ ಬೋಧಕಸಿಬ್ಬಂದಿಯ ಕಳವಳವನ್ನು ನಾವು ಅನುಭವಿಸಿಲ್ಲ. ಸಮಾಜಶಾಸ್ತ್ರ ವಿಭಾಗದ "ಉಪದ್ರವಕಾರಿಗಳ" ಬಗ್ಗೆ ಸಾಂದರ್ಭಿಕ ಅಪಹಾಸ್ಯದ ಪ್ರಸ್ತಾಪವನ್ನು ಹೊರತುಪಡಿಸಿ, ನಮ್ಮ ಆವರಣದ ಆಡಳಿತವರ್ಗದವರು (ಮೂವರು ವಿವಿಧ ಅಧ್ಯಕ್ಷರು, ಮುಖ್ಯಾಧಿಕಾರಿಗಳು, ಹಾಗೂ ವಿಭಾಗ ಮುಖ್ಯಸ್ಥರನ್ನೊಳಗೊಂಡಂತೆ), ನಮ್ಮ ಪಠ್ಯಕ್ರಮದ ವಿಷಯದಲ್ಲಿ ಎಂದಿಗೂ ಹಸ್ತಕ್ಷೇಪ ಮಾಡಿರುವುದಿಲ್ಲ. ಇದು ಭಾಗಶಃ ನಮ್ಮ ಬೋಧಕ ಸಿಬ್ಬಂದಿಯ ಶ್ರಮಿಕ ಸಂಘದ ಸಾಪೇಕ್ಷ ಪ್ರಾಬಲ್ಯದಿಂದಾಗಿಯೂ ಇರಬಹುದು, ಮತ್ತು ಅದು ಶೈಕ್ಷಣಿಕ ಸ್ವಾತಂತ್ರ್ಯಕ್ಕೆ ಅತ್ಯಂತ ಹೆಚ್ಚಿನ ಪ್ರಾಮುಖ್ಯತೆ ನೀಡುವಂತಹ ಆವರಣ ಸಂಸ್ಕೃತಿಯ ಪ್ರತಿಬಿಂಬವೂ ಆಗಿರಬಹುದು. ಏನೇ ಇದ್ದರೂ, ಅದು ನಮ್ಮ ವಿಶಿಷ್ಟ ರಚನಾತ್ಮಕ ಸಂದರ್ಭಕ್ಕಿಂತ ಹೆಚ್ಚಾಗಿ, ವಿದ್ಯಾರ್ಥಿ-ಕೇಂದ್ರಿತ ಅಧ್ಯಯನ ಸರಣಿಯೊಂದನ್ನು ನಿಯಂತ್ರಿಸುವ ಪ್ರಯತ್ನದ ಸಂಭಾವ್ಯ ಪರಿಣಾಮಗಳಿಗೆ ಸಂಬಂಧಿಸಿದ್ದಾಗಿದೆ ಎಂದು ನಾವು ಊಹಿಸುತ್ತೇವೆ. ನಮ್ಮ ವಿದ್ಯಾರ್ಥಿಗಳು ವಿಸ್ತೃತ ವ್ಯಾಪ್ತಿಯಲ್ಲಿ ಗುರುತಿಸಲಾದಂತಹ ಒಂದು ಸಮುದಾಯ ಸಮಸ್ಯೆಯನ್ನು ಸಂಬೋಧಿಸುತ್ತಿದ್ದು, ನಿರಂತರವಾಗಿ ಸಕಾರಾತ್ಮಕ ಮುದ್ರಣ ಮಾಧ್ಯಮದ ಬೆಂಬಲ ಪಡೆಯುತ್ತಿರುವುದರಿಂದ, ಮತ್ತು ಬೋಧಕಸಿಬ್ಬಂದಿ ಹಾಗೂ ಇತರ ವಿದ್ಯಾರ್ಥಿಗಳಿಂದ ವ್ಯಾಪಕವಾದ ಬೆಂಬಲವನ್ನು ಕಾಣುತ್ತಿರುವುದರಿಂದ, ಅಧ್ಯಯನ

ಸರಣಿಯನ್ನು ಸೀಮಿತಗೊಳಿಸುವ ಯಾವುದೇ ಪ್ರಯತ್ನವು ನಕಾರಾತ್ಮಕ ಹಿಂಪೆಟ್ಟನ್ನು ನೀಡುವ ಸಂಭವವಿದೆ. ಅಷ್ಟೇ ಅಲ್ಲದೆ, ಸಮಾಜಶಾಸ್ತ್ರದ ಅಧ್ಯಯನ ಸರಣಿಯೊಂದರ ಪ್ರತ್ಯೇಕೀಕರಣವು, ಹೆಚ್ಚಿನ ಸಾಂಪ್ರದಾಯಿಕ ವ್ಯವಸ್ಥೆಗಳಲ್ಲಿ ಘಟಿಸುತ್ತಿರುವ ಸಮುದಾಯ-ಆಧಾರಿತ ಕಲಿಕೆಯ ನಿಟ್ಟಿನ ವಿದ್ಯಾರ್ಥಿ ಪ್ರಶಿಕ್ಷಣ (internship) ಹಾಗೂ ಪ್ರಯೋಗಮಾಲಿಕೆಗಳನ್ನು ಸಹ ಪ್ರಶ್ನಿಸಲು ಅವಕಾಶವನ್ನು ನೀಡಬಹುದು - ಇದನ್ನು ಹೆಚ್ಚಿನ ಆಡಳಿತಾಧಿಕಾರಿಗಳು ತಪ್ಪಿಸಬಯಸುತ್ತಾರೆ.

ವಿದ್ಯಾರ್ಥಿಗಳ ಬಾಡಿಗೆದಾರ ಸಂಘವನ್ನು, ಅದರ ಉತ್ಕೃಷ್ಟ ಅವಸ್ಥೆಯಲ್ಲಿ ಸ್ಥಳೀಯ ನ್ಯಾಯಕ್ಕೆ ಸಂಬಂಧಿಸಿದ ಚಳುವಳಿಯಾಗಿ ಕಾಣಬಹುದು. ಈವರೆಗೆ ಆರ್ಥಿಕ ಸಂಬಂಧಗಳ ಬದಲಾವಣೆ ಅಥವಾ ವಿಶ್ವವಿದ್ಯಾನಿಲಯದ ವ್ಯವಸ್ಥೆಯ ಸ್ವರೂಪದ ಪರಿವರ್ತನೆಯ ಬಗ್ಗೆ ಯಾವುದೇ ಸಾಕ್ಷಿಯಿಲ್ಲ.[3] ಸುಧಾರಿತ ಸಮಾಜಶಾಸ್ತ್ರದ ಪಠ್ಯಕ್ರಮವು ಸ್ವತಃ ಕ್ರಾಂತಿಕಾರಿ ಬದಲಾವಣೆಯನ್ನು ಉಂಟುಮಾಡುತ್ತದೆಂದು ನಂಬುವಷ್ಟು ನಾವು ಮುಗ್ಧರಲ್ಲ. ವಿಮೋಚನೆಯ ಕಡೆಗೆ ಒಂದು ಸಣ್ಣ ಹೆಜ್ಜೆಯ ಪ್ರಸ್ತಾಪವನ್ನು ನಾವು ಮಂಡಿಸುತ್ತಿದ್ದೇವೆ. Paulo Freiree (1974:47) ಅವರ ಮಾತಿನಲ್ಲಿ ಹೇಳುವುದಾದರೆ, "ದಬ್ಬಾಳಿಕೆಯ ಪರಿಸ್ಥಿತಿಯನ್ನು ಹತ್ತಿಕ್ಕಲು, ಪರಿವರ್ತನಾಕ್ರಿಯೆಯ ಮೂಲಕ - ಒಂದು ಪರಿಪೂರ್ಣ ಮಾನವೀಯತೆಯ ಅನುಸರಣೆಯನ್ನು ಸಾಧ್ಯಗೊಳಿಸುವಂತಹ - ಹೊಸತೊಂದು ಸನ್ನಿವೇಶವನ್ನು ರೂಪಿಸಬಹುದಾದ ರೀತಿಯಲ್ಲಿ, ಜನರು ಮೊದಲು ಅದಕ್ಕೆ ಕಾರಣಗಳನ್ನು ವಿಮರ್ಶಾತ್ಮಕವಾಗಿ ಗುರುತಿಸಬೇಕು".

Dean Braa ಅವರು, ಪಶ್ಚಿಮ ಒರೆಗಾನ್ ವಿಶ್ವವಿದ್ಯಾನಿಲಯದ ಸಮಾಜಶಾಸ್ತ್ರದ ಸಹ ಪ್ರಾಧ್ಯಾಪಕರಾಗಿದ್ದಾರೆ. ಅವರ ಶೈಕ್ಷಣಿಕ ಆಸಕ್ತಿಗಳು ರಾಜನೈತಿಕ-ಆರ್ಥಿಕತೆ, ಸಿದ್ಧಾಂತ, ಸಾಮಾಜಿಕ ಸಮಸ್ಯೆಗಳು ಹಾಗೂ ಐತಿಹಾಸಿಕ ಸಮಾಜಶಾಸ್ತ್ರಗಳನ್ನು ಒಳಗೊಂಡಿವೆ. ವಿವಿಧ ವಿಮರ್ಶಾತ್ಮಕ ಬೋಧನಶಾಸ್ತ್ರದ ಪರಿಕಲ್ಪನೆಗಳು ಹಾಗೂ ಪ್ರಕ್ರಿಯೆಗಳನ್ನು ಆಧರಿಸಿದ ಸಮಾಜಶಾಸ್ತ್ರೀಯ ಕಾರ್ಯಯೋಜನೆಯ ಅಭಿವೃದ್ಧಿಯಲ್ಲಿಯೂ ಅವರು ಆಸಕ್ತರಾಗಿದ್ದಾರೆ. ಡೀನ್ ಅವರು ಸಾಂದರ್ಭಿಕವಾಗಿ ಸಂಘ ಹಾಗೂ ರಾಜಕೀಯದಲ್ಲಿ ಸಕ್ರಿಯರಾಗಿದ್ದಾರೆ.

ಉಲ್ಲೇಖಗಳು:

Alinsky, Saul. 1969. *Reveille for Radicals.* New York: Random House.

______. 1971. *Rules for Radicals.* New York: Random House.

---

[3] ಬಾಡಿಗೆದಾರರ ಸಂಘರ್ಷಗಳು ಇಂತಹ ಬದಲಾವಣೆಯನ್ನು ಉಂಟುಮಾಡಲಾರವು ಎಂಬುದು ಇದರ ಅರ್ಥವಲ್ಲ. Aronowitz (2003:53) ಅವರು ಗುರುತಿಸಿದಂತೆ, 20ನೇ ಶತಮಾನದ ಕಾಲಘಟ್ಟದಲ್ಲಿ, ನ್ಯೂ ಯಾರ್ಕ್‌ನಲ್ಲಿನ ಬಾಡಿಗೆದಾರರ ಸಂಘಗಳು, "ನಗರದ ಸ್ಥಿರಾಸ್ಥಿಯ (real estate) ಉದ್ಯಮದ ಸ್ವರೂಪವನ್ನು ಪರಿಣಾಮಕಾರಿಯಾಗಿ ಬದಲಿಸಿದ ಮತ್ತು ಸುಮಾರು ಅರ್ಧ ಶತಮಾನದರೆಗೆ ನಗರದ ರಾಜಕಾರಣದಲ್ಲಿನ ಭೂಮಾಲೀಕರ ಪ್ರಾಬಲ್ಯವನ್ನು ದುರ್ಬಲಗೊಳಿಸಿದ ವರ್ಗ ಸಂಘರ್ಷಗಳಲ್ಲಿ ತೊಡಗುವ ನಿಟ್ಟಿನಲ್ಲಿ, ಒಕ್ಕೂಟಗಳು ಮತ್ತು ತೀವ್ರ ಸುಧಾರವಾದಿ ರಾಜಕೀಯ ಪಕ್ಷಗಳೊಂದಿಗೆ ಮೈತ್ರಿಯನ್ನು ಬೆಳೆಸಿದವು."

Allman, Paula. 1988. *"*Gramsci, Freire, and Illich: Their Contributions to Education for Socialism." Pp. 85-113 in *Radical Approaches to Adult Education,* edited by Tom Lovett*.* London, England: Routledge.
Apple, Michael. 1985. *Education and Power.* Boston, MA: Ark Paperbacks.
_____. 1990. *Ideology and Curriculum.* New York: Routledge.
Aronowitz, Stanley. 2003. *How Class Works: Power and Social Movement*. New Haven, CT: Yale.
Beyer, Landon. 1996. *Creating Democratic Classrooms.* New York: Teachers College Press.
Bhaskar, Roy. 1989. *Reclaiming Reality.* New York: Verso Editions.
_____. 1997. *A Realist Theory of Science.* New York: Verso Editions.
Boggs, Carl. 1976. *Gramsci's Marxism.* London, England: Pluto Press.
Bowles, Samuel and Herbert Gintis. 1976. *Schooling in Capitalist America.* New York: Basic Books.
Callero, Peter L. 2003. "The Political Self: Identity Resources for Radical Democracy." Pp. 57-70 in *Advances in Identity Theory and Research*, edited by Peter J. Burke, Timothy J. Owens, Richard T. Serpe, and Peggy A. Thoits. New York: Kluwer/Plenum Press.
Callinicos, Alex. 1992. *Against Postmodernism: A Marxist Critique.* Oxford, England: Blackwell Publishers.
Collier, Andrew. 1994. *Critical Realism: An Introduction to Roy Bhaskar's Philosophy.* New York: Verso Editions*.*
Darder, Antonia, Marta Baltodano, and Rodolfo D. Torres. 2003. *The Critical Pedagogy Reader.* New York: Routledge.
Feagin, Joe and Hernan Vera. 2001. *Liberation Sociology.* Boulder, CO: Westview.
Forgacs, David, ed. 2000. *Antonio Gramsci: Selections form Cultural Writings.* Cambridge, MA: Harvard University Press.
Freire, Paulo. 1973. *Education for Critical Consciousness.* New York: Continuum Books.
_____. 1974. *Pedagogy of the Oppressed.* New York: Seabury Press.
Gimenez, Martha. 1998. "The Radical Pedagogy Mystique: A View from the Trenches. Response to 'Practicing Radical Pedagogy: Balancing Ideals with Institutional Constraints.'" *Teaching Sociology* 19:116-21.
Giroux, Henry. 2003. "Education Incorporated." Pp. 27-56 in *The Critical Pedagogy Reader*, edited by Antonia Darder, Marta Baltodano, and Rodolfo D. Torres*.* London, England: Routledge.
Granvelle. 1999. "Students Form Tenants Union." *Statesman Journal,* November 19, p. A1.
Kaufman, Peter. 2002. *Critical Pedagogy in the Sociology Classroom.* Washington, DC:

American Sociological Association.
Keat, Russell and John Urry. 1982. *Social Theory As Science.* London, England: Routledge and Kegan Paul Ltd.
Mayo, Peter. 1999. *Gramsci, Freire, and Adult Education.* New York: Zed Books.
McLaren, Peter. 2003. *Life in Schools: An Introduction to Critical Pedagogy.* New York: Pearson.
Morrow, Raymond and Carlos Torres. 1995. *Social Theory and Education.* Albany, NY: State University of New York Press.
Shor, Ira. 1987. *Freire for the Classroom.* Portsmouth, NH: Boynton/Cook Publishers.
_____. 1992. *Empowering Education.* Chicago, IL: Chicago University Press.
Sweet, Stephen. 1998. "Practicing Radical Pedagogy: Balancing Ideals with Institutional Constraints." *Teaching Sociology* 26:100-11.
*Teaching Sociology*. 1998. Special Issue. 26(2).
Zinn, Howard. 2001. *A People's History of the United States.* New York: Harper Perennial.

Dean Braa ಅವರು, ಪಶ್ಚಿಮ ಒರೆಗಾನ್ ವಿಶ್ವವಿದ್ಯಾನಿಲಯದ ಸಮಾಜಶಾಸ್ತ್ರದ ಸಹ ಪ್ರಾಧ್ಯಾಪಕರಾಗಿದ್ದಾರೆ. ಅವರ ಶೈಕ್ಷಣಿಕ ಆಸಕ್ತಿಗಳು ರಾಜನೈತಿಕ-ಆರ್ಥಿಕತೆ, ಸಿದ್ಧಾಂತ, ಸಾಮಾಜಿಕ ಸಮಸ್ಯೆಗಳು ಹಾಗೂ ಐತಿಹಾಸಿಕ ಸಮಾಜಶಾಸ್ತ್ರಗಳನ್ನು ಒಳಗೊಂಡಿವೆ. ವಿವಿಧ ವಿಮರ್ಶಾತ್ಮಕ ಬೋಧನಶಾಸ್ತ್ರದ ಪರಿಕಲ್ಪನೆಗಳು ಹಾಗೂ ಪ್ರಕ್ರಿಯೆಗಳನ್ನು ಆಧರಿಸಿದ ಸಮಾಜಶಾಸ್ತ್ರೀಯ ಕಾರ್ಯಯೋಜನೆಯ ಅಭಿವೃದ್ಧಿಯಲ್ಲಿಯೂ ಅವರು ಆಸಕ್ತರಾಗಿದ್ದಾರೆ. ಡೀನ್ ಅವರು ಸಾಂದರ್ಭಿಕವಾಗಿ ಸಂಘ ಹಾಗೂ ರಾಜಕೀಯದಲ್ಲಿ ಸಕ್ರಿಯರಾಗಿದ್ದಾರೆ.

Peter Callero ಅವರು, ಪಶ್ಚಿಮ ಒರೆಗಾನ್ ವಿಶ್ವವಿದ್ಯಾನಿಲಯದಲ್ಲಿ ಸಮಾಜಶಾಸ್ತ್ರದ ಪ್ರಾಧ್ಯಾಪಕರಾಗಿದ್ದು, ಸಮುದಾಯ ಸಂಘಟನೆ, ಸಾಮಾಜಿಕ ಸಿದ್ಧಾಂತ ಹಾಗೂ ಸಂಶೋಧನಾ ವಿಧಾನಗಳ ಅಧ್ಯಯನ ಸರಣಿಗಳಿಗೆ ಬೋಧಿಸುತ್ತಾರೆ. ಅವರ ಸಂಶೋಧನ ಆಸಕ್ತಿಗಳು ಅಧಿಕಾರದ ಜಿಜ್ಞಾಸೆಗಳು ಹಾಗೂ ಸ್ವ-ಸಹಾಯ ಸಮಾಜದ ಸಂಬಂಧಗಳಲ್ಲಿನ ರಾಜಕೀಯದಲ್ಲಿ ಕೇಂದ್ರಿತವಾಗಿವೆ.